# ಮನುವಿಕಾಸ

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ವಾರ್ತಾ ಪತ್ರ ಖಾಸಗಿ ಪ್ರಚಾರಕ್ಕಾಗಿ ಮಾತ್ರ

ಸಂಪಾದಕರು : ಗಣಪತಿ ಭಟ್ಟ

ಸಂಪಾದಕೀಯ ಮಂಡಳಿ – ಶುಭಾ ಪೈ, ಗಣಪತಿ ಹೆಗಡೆ, ಗೀತಾ ನಿಲೇಕಣಿ, ಕುಸುಮಾ ಕೋಟೆಗದ್ದೆ

ಸಂಚಿಕೆ : 3 ಸಂಪುಟ : 7





## ಮನುವಿಕಾಸ ಸಂಸ್ಥೆಯಿಂದ ಸಿದ್ದಾಪುರದಲ್ಲಿ ಬೃಹತ್ ಮಹಿಳಾ ಸಮಾವೇಶ ಆಯೋಜನೆ

ಮನುವಿಕಾಸ ಸಂಸ್ಥೆ ಹಾಗೂ ಈಡೇಲ್‌ಗೀವ್ ಫೌಂಡೇಶನ್ ಸಹಯೋಗದೊಂದಿಗೆ 'ನಾರಿಶಕ್ತಿ ಗ್ರೀನ್‌ವೇ'ಯೋಜನೆಯ ಅಡಿಯಲ್ಲಿ ದಿನಾಂಕ 5/3/2025 ಬುಧವಾರದಂದು ಸಿದ್ದಾಪುರ ತಾಲೂಕಿನ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ಮಹಿಳಾ ಸಮಾವೇಶವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮನುವಿಕಾಸ ಸಂಸ್ಥೆಯ ನಿರ್ದೇಶಕ ಗಣಪತಿ ಭಟ್ಟ ಮಾತನಾಡಿ ಕೆಲ ಯೋಜನೆಯ ಮಾಹಿತಿಯು ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೆ ತಲುಪುತ್ತಿಲ್ಲ, ಮಾಹಿತಿ ಪಡೆಯಲು ಜನರು ಮುಂದಾಗಬೇಕಿದೆ. ಬಡತನದಿಂದ ಹೊರಬರಲು ಯೋಜನೆಯನ್ನು ರೂಪಿಸುವ ವೇದಿಕೆ ಮನುವಿಕಾಸ ಸಂಸ್ಥೆಯಾಗಿದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಜನರು ಮುಂದಾಗಬೇಕಿದೆ.

ಮಳೆಗಾಲದಲ್ಲಿ ಪ್ರವಾಹಕ್ಕೆ ಒಳಗಾದ 4000 ಸಂತ್ರಸ್ತ ಕುಟುಂಬಗಳಿಗೆ 1.5 ಕೋಟಿ ರೂಪಾಯಿ ವೆಚ್ಚದಲ್ಲಿ ಅಗತ್ಯ ಪರಿಕರಗಳ ನೆರವನ್ನು ನೀಡಿದ್ದೇವೆ. ಕುಂದಾಪುರದಲ್ಲಿ ಮೀನುಗಾರ ಮಹಿಳೆಯರಿಗೆ ಅನುಕೂಲವಾಗಲು ಪಂಜರು ಮೀನು ಕೃಷಿ ಮತ್ತು ಮೀನು ಒಣಗಿಸುವ ಪರಿಕರಗಳ ಸೌಲಭ್ಯವನ್ನು ನೀಡಿದ್ದೇವೆ. ಕೈ ತೋಟ ನಿರ್ವಹಣೆಗೆ ತರಕಾರಿ ಬೀಜಗಳನ್ನು ಮಹಿಳೆಯರಿಗೆ ನೀಡಿದ್ದೇವೆ. ಜೇನು ಪೆಟ್ಟಿಗೆಯನ್ನು ಸ್ವ ಸಹಾಯ ಸಂಘದ ಮಹಿಳೆಯರಿಗೆ ನೀಡಿ ಅದರ ನಿರ್ವಹಣಾ ಕೆಲಸವನ್ನು ಸಹ ಮಾಡುತ್ತಿದ್ದೇವೆ. ಜನರು ಹಣಕಾಸು ವ್ಯವಸ್ಥೆಯಲ್ಲಿ ಶಿಸ್ತು ಅಳವಡಿಸಿಕೊಳ್ಳಬೇಕು, ಸಾಲದ ಹಣ ಪಡೆದಾಗ ಅದರ ಸುರಕ್ಷತೆಯ ಬಗ್ಗೆ ಹೆಚ್ಚಿನ ಗಮನ ಹರಿಸಿಬೇಕು ಎಂದು ಹೇಳಿದರು. ಮಹಿಳೆಯರಲ್ಲಿ ಉದ್ಯಮಶೀಲತೆ ಗುಣವನ್ನು ಬೆಳೆಸಲು ಇಂತಹ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ಜಿಲ್ಲಾ ಅಗ್ರಗಣ್ಯ ಬ್ಯಾಂಕನ ಜಿಲ್ಲಾ ವ್ಯವಸ್ಥಾಪಕರಾದ ಶ್ರೀಮತಿ ಭಾರತಿ ವಸಂತ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಹಿಳೆಯರು ಮೈಕ್ರೊ ಫೈನಾನ್ಸ್ ಅಥವಾ ಮೀಟರ್ ಬಡ್ಡಿಯಲ್ಲಿ ಸಾಲಪಡೆಯಬೇಡಿ. ಬ್ಯಾಂಕುಗಳು 11% ಬಡ್ಡಿದರದಲ್ಲಿ ಸಾಲನೀಡುತ್ತಿವೆ. ಸ್ವ ಉದ್ಯೋಗಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ಸಾಲ ಸೌಲಭ್ಯ ದೊರೆಯುತ್ತಿದೆ. ಕಾಲ ಕಾಲಕ್ಕೆ ಸರಿಯಾಗಿ ಸಾಲದ ಕಂತನ್ನು ಪಾವತಿಸಿ, ನಿರ್ಲಕ್ಷಿಸಿದರೆ ಸಿಬಿಲ್ ಹಿಸ್ಟರಿ ಆಧಾರದ ಮೇಲೆ ಬೇರೆ ಬ್ಯಾಂಕುಗಳಲ್ಲಿ ಸಾಲ ದೊರೆಯುವುದಿಲ್ಲ ಎಂದು ತಿಳಿ ಹೇಳಿದರು.

ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ ರಾಣೆಬೆನ್ನೂರು ತಾಲೂಕಿನ ವನಸಿರಿ ಸಂಸ್ಥೆಯ ಸಂಸ್ಥಾಪಕ ಎಸ್. ಡಿ. ಬಳಿಗಾರ ಮಾತನಾಡಿ ಗ್ರಾಮೀಣ ಜನರ ಬದುಕಿನ ಕಷ್ಟ ಕಾರ್ಪಣ್ಯವನ್ನು ಹತ್ತಿರದಿಂದ ಬಲ್ಲವರು ಗಣಪತಿ ಭಟ್ಟರು. ನಶಿಸುತ್ತಿರುವ ಕೆರೆ ಕಟ್ಟೆಗಳನ್ನು ಹೂಳೆತ್ತಿ ರೈತರ ಜಮೀನು ಫಲವತ್ತಾಗುವಂತೆ ಮನುವಿಕಾಸ ಸಂಸ್ಥೆ ಮಾಡಿದೆ. ಮಹಿಳೆಯರಿಗೆ ಸ್ವ ಉದ್ಯೋಗದ ತರಬೇತಿ ನೀಡಿ ಉದ್ಯಮಶೀಲತೆಗೆ ಶ್ರಮಿಸುವುದು ಶ್ಲಾಘನೀಯವಾಗಿದೆ ಎಂದರು. ಮಹಿಳೆಯರು ಕೇವಲ ಯೋಜನೆಗಳಿಗೆ ಮಾತ್ರ ಹೋರಾಟ ಮಾಡದೇ ಹಕ್ಕುಗಳಿಗೆ ಹೋರಾಡಬೇಕಿದೆ, ನರೇಗಾ ಸರಿಯಾಗಿ ಅನುಷ್ಠಾನ ಮಾಡಿದರೆ ವಲಸೆ ಹೋಗುವುದನ್ನು ತಪ್ಪಿಸಬಹುದು ಎಂದರು.

ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ ಸಿದ್ದಾಪುರ ತಾಲೂಕಿನ ಸಹಾಯಕ ನಿರೀಕ್ಷಕ ಪೋಲೀಸ್ ಅಧಿಕಾರಿ ಗೀತಾ ಕಾನಡೆ ಮಾತನಾಡಿ, ಇತ್ತಿಚೀನ ದಿನಮಾನಗಳಲ್ಲಿ ಸೈಬರ್ ಅಪರಾಧ ಹೆಚ್ಚುತ್ತಿದೆ, ಸಾಮಾಜಿಕ ಜಾಲತಾಣದಲ್ಲಿ ಈ ಬಗೆಯ ಅಪರಾಧ ಹೆಚ್ಚುತ್ತಿದ್ದೆ. ಮಹಿಳೆಯರಲ್ಲಿ ಹೆಚ್ಚಿನ ಜನ ಜಾಗೃತಿ ಇರಲಿ ಎಂದು ಕರೆ ನೀಡಿದರು.

ಪುಟ 3ಕ್ಕೆ

# ಸಂಪಾದಕೀಯ



## ಆತ್ಮೀಯ ಓದುಗರೇ......

ಮನುವಿಕಾಸ ಸಂಸ್ಥೆಯ ಈ ಬಾರಿಯ ವಾರ್ತಾ ಪತ್ರವನ್ನು ತಮ್ಮ ಮುಂದಿಡಲು ನಮಗೆ ಅತೀವ ಸಂತಸವೆನಿಸುತ್ತಿದೆ. ಸಂಸ್ಥೆಯು 22 ವಸಂತಗಳನ್ನು ಪೂರೈಸಿ, ಮಹಿಳಾ ಸಬಲೀಕರಣ, ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನ, ಕೃಷಿ ಹೊಂಡ ನಿರ್ಮಾಣ, ರೈತ ಉತ್ಪಾದಕ ಸಂಘಗಳ ಸ್ಥಾಪನೆ ಮತ್ತು ಇವುಗಳ ಸುಸ್ಥಿರತೆಗೆ ಪೂರಕವಾಗಿರುವ ಕಾರ್ಯಚಟುವಟಿಕೆಗಳನ್ನು ರೂಪಿಸಿ ಅವಿರತವಾಗಿ ಶ್ರಮಿಸುತ್ತಿದೆ.

ಮುಂದಿನ ಪೀಳಿಗೆಯನ್ನು ಸಶಕ್ತಗೊಳಿಸಲು ಮಹಿಳೆಯರನ್ನು ಸಶಕ್ತಗೊಳಿಸಿ ಎನ್ನುವ ಮಾತಿನಂತೆ ಮಹಿಳೆಯರನ್ನು ಸ್ವ-ಉದ್ಯಮಶೀಲರನ್ನಾಗಿಸಲು ಮತ್ತು ಅವರಲ್ಲಿ ಆರ್ಥಿಕ ಸ್ವಾವಲಂಬನೆಯನ್ನು ಮೂಡಿಸಿ ನಾಯಕತ್ವದ ಗುಣಗಳನ್ನು ಬೆಳೆಸಲು ಸಂಸ್ಥೆಯು ಎರಡು ದಶಕದಿಂದ ಹಲವಾರು ನಾವಿನ್ಯತೆಯುಳ್ಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಮುಖ್ಯವಾಗಿ ಸಂಸ್ಥೆಯು ಈಡಲ್‌ಗೀವ್ ಫೌಂಡೇಶನ್‌ನ ಸಹಯೋಗದೊಂದಿಗೆ 'ನಾರಿ ಶಕ್ತಿ ಗ್ರೀನ್‌ವೇ ಯೋಜನೆಯ ಅಡಿಯಲ್ಲಿ ಸ್ವ- ಸಹಾಯ ಸಂಘಗಳ ನಿರ್ಮಾಣ, ಸುಧಾರಿತ ಹೊಲಿಗೆ ತರಬೇತಿ, ಕೇಟರಿಂಗ್, ಸುಸ್ಥಿರ ಕೃಷಿ, ಡಿಜಿಟಲ್ ಲಿಟರಸಿ, ಬೀಜ ಬ್ಯಾಂಕಿಂಗ್, ಫೋಟಾಗ್ರಾಫಿ ಮತ್ತು ವಿಡಿಯೋಗ್ರಾಫಿ, ವಿಡಿಯೋ ಎಡಿಟಂಗ್, ಶಾಪ್ ಕೀಪಿಂಗ್ ಮತ್ತು ರಿಟೇಲ್ ಮಾರ್ಕೆಟಂಗ್ ಮತ್ತು ಕೈತೋಟ ನಿಮಾಣ, ಹೈನುಗಾರಿಕೆ ಮೊದಲಾದ ಕೌಶಲ್ಯಾಧಾರಿತ ತರಬೇತಿಗಳನ್ನು ಮತ್ತು ಮಹಿಳಾ ಸಮಾವೇಶ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಜೊತೆಗೆ ಸ್ವ –ಸಹಾಯ ಸಂಘದ ಮಹಿಳೆಯರಗೆ ಕೋಳಿಮರಿ, ಜೇನು ಪೆಟ್ಟಿಗೆ, ಸಾವಯವ ತರಕಾರಿ ಬೀಜಗಳು ಮತ್ತು ಗೊಬ್ಬರಗಳ ವಿತರಣೆಯನ್ನು ಮಾಡಿ ಸಮುದಾಯಕ್ಕೆ ಪರ್ಯಾಯ ಜೀವನೋಪಾಯ ನಿರ್ವಹಣೆಗೆ ಪ್ರೋತ್ಸಾಹವನ್ನು ನೀಡಿದೆ. ಈ ಕುರಿತ ಸಮಗ್ರ ವರದಿ ಸಂಚಿಕೆಯಲ್ಲಿ ಅಡಕವಾಗಿದೆ.

"ಊರು ಕಟ್ಟುವ ಮೊದಲು ಕೆರೆ ಕಟ್ಟು" ಅನ್ನುವ ಮಾತಿನಂತೆ ರೈತರ ಸಹಭಾಗಿತ್ವದಲ್ಲಿ ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನ ಕಾರ್ಯಕ್ರಮದ ಅಡಿಯಲ್ಲಿ ಸಂಸ್ಥೆಯು ಈಗಾಗಲೇ 300ಕ್ಕೂ ಹೆಚ್ಚು ಕೆರೆಗಳನ್ನು ಪುನರುಜ್ಜೀನಗೊಳಿಸಿದೆ.
ಈ ಕಾರ್ಯಕ್ಕೆ ಹಲವಾರು ದಾನಿ ಸಂಸ್ಥೆಗಳು ಆರ್ಥಿಕ ಬೆಂಬಲ ನೀಡಿವೆ. ಉತ್ತರ ಕನ್ನಡ, ಹಾವೇರಿ, ಧಾರವಾಡ, ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಪ್ರಗತಿಯಲ್ಲಿದೆ. ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಉಪಯೋಗ ಮತ್ತು ಮಾನವನ ಮೂಲಭೂತ ಅವಶ್ಯಕತೆಯಲ್ಲಿ ಅಗ್ರ ಸ್ಥಾನ ಪಡೆದಿರುವ ನೀರನ್ನು ಮುಂದಿನ ಪೀಳಿಗೆಗೆ ಕಾಪಿಡುವ ಕೆಲಸವನ್ನು ಸಂಸ್ಥೆ ಮಾಡುತ್ತಿದೆ. ಸಂಸ್ಥೆಯು ಈಗಾಗಲೇ 4000ಕ್ಕೂ ಹೆಚ್ಚು ಕೃಷಿ ಹೊಂಡಗಳನ್ನು ರೈತ ಸಮುದಾಯಕ್ಕೆ ನಿರ್ಮಿಸಿಕೊಟ್ಟಿದೆ. ಏಕ ಬೆಳೆಗೆ ಸೀಮಿತವಾಗಿದ್ದ ರೈತರು ಮಿಶ್ರ ಬೇಸಾಯ, ತೋಟಗಾರಿಕಾ ಬೆಳೆಗಳು ಮೊದಲಾದ ಉಪ ಆದಾಯ ತರುವಂತಹ ಬೆಳೆಗಳನ್ನು ಬೆಳೆದು ಆರ್ಥಿಕ ಪ್ರಗತಿಯನ್ನು ಸಾಧಿಸಿದ್ದಾರೆ. ಈ ಕುರಿತಾದ ವರದಿಗಳನ್ನು ಸಂಚಿಕೆ ಒಳಗೊಂಡಿದೆ.

ಪ್ರಸಕ್ತ ವರ್ಷ ಸಂಸ್ಥೆಯು ಸ್ಮೈಲ್ ಫೌಂಡೇಶನ್‌ನ ಸಹಯೋಗದೊಂದಿಗೆ ಆಯ್ದ ಮಹಿಳೆಯರಿಗೆ ಕೌಶಲ್ಯಾಧಾರಿತ ತರಬೇತಿಗಳನ್ನು ಆಯೋಜಿಸಿದ್ದು ಆ ಕುರಿತಾದ ವರದಿಗಳನ್ನು ಸಂಚಿಕೆಯಲ್ಲಿ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಡೋಂಗ್ರಿ ಗ್ರಾಮ ಪಂಚಾಯತಿಯ ವ್ಯಾಪ್ತಿಯ 150 ಸಿದ್ದಿ ಕುಂಟುಬಗಳಿಗೆ ಸಂಸ್ಥೆಯು ನಬಾರ್ಡ್‌ನ ಸಹಯೋಗದೊಂದಿಗೆ ಪರ್ಯಾಯ ಜೀವನೋಪಾಯ ನಿರ್ವಹಣೆ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ. ಫಲಾನುಭವಿಗಳಿಗೆ ಜೇನುಪೆಟ್ಟಿಗೆ, ಎರೆಹುಳು ಘಟಕದ ನಿರ್ಮಾಣ, ಕೋಳಿ ಗೂಡು ಮತ್ತು ಮರಿಗಳು, ಸಾವಯವ ಗೊಬ್ಬರ ಮತ್ತು ಬೀಜಗಳ ವಿತರಣೆಯ ಜೊತೆಗೆ ಸೂಕ್ತ ತರಬೇತಿಗಳನ್ನು ನೀಡುತ್ತಿದೆ ಆ ಕುರಿತಾದ ಮಾಹಿತಿ ಸಂಚಿಕೆಯಲ್ಲಿದೆ.

ಇತ್ತೀಚೆಗೆ ಮನುವಿಕಾಸ ಸಂಸ್ಥೆಯಿಂದ ಪ್ರೋತ್ಸಾಹಿತ ಪ್ರಗತಿಮಿತ್ರ ನಾರ್ಥ ಕೆನರಾ ರೈತ ಉತ್ಪಾದಕ ಕಂಪನಿ ಬಾಳೆಗದ್ದೆಗೆ ರಾಷ್ಟ್ರಮಟ್ಟದ ಅತ್ಯುತ್ತಮ ರೈತ ಉತ್ಪಾದಕ ಕಂಪನಿ ಪ್ರಶಸ್ತಿ ಲಭಿಸಿದೆ, ಇದು ಸಂಸ್ಥೆಯ ಅವಿರತ ಶ್ರಮಕ್ಕೆ ಸಿಕ್ಕಂತಹ ಫಲವಾಗಿದೆ. ಈ ನಿಟ್ಟಿನಲ್ಲಿ ಶ್ರಮಿಸಿದ ಕಂಪನಿಯ ಎಲ್ಲ ಸಿಬ್ಬಂದಿ ವರ್ಗಕ್ಕೆ ಈ ಮೂಲಕ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇವೆ. "ಹನಿ ಹನಿ ಕೂಡಿದರೆ ಹಳ್ಳ" "ತೆನೆ ತೆನೆ ಸೇರಿದರೆ ಬಳ್ಳ" ಎನ್ನುವ ನಾಣ್ಣುಡಿಯಂತೆ ನಾವು ಮಾಡುವ ಪ್ರಯತ್ನಕ್ಕೆ ಜನ ಸಮುದಾಯದ ಸಹಕಾರವಿದ್ದರೆ ಮಾತ್ರ ಅನುಷ್ಠಾನಗೊಳಿಸಲಾದ ಯೋಜನೆಗಳು ಸಮುದಾಯದ ಕಟ್ಟ ಕೊನೆಯ ವ್ಯಕ್ತಿಯನ್ನು ತಲುಪಿ ಯಶಸ್ವಿಯಾಗಲು ಸಹಕಾರಿಯಾಗುತ್ತದೆ. ಈ ನಿಟ್ಟನಲ್ಲಿ ಸಂಸ್ಥೆಯು ತನ್ನ ಎಲ್ಲ ಕಾರ್ಯಯೋಜನೆಗಳಿಗೆ ತಮ್ಮಿಂದ ಅಗತ್ಯ ಸಹಕಾರ ಮತ್ತು ಸಲಹೆಗಳನ್ನು ಮುಕ್ತವಾಗಿ ಸ್ವೀಕರಿಸುತ್ತದೆ.

ಸಂಸ್ಥೆಯ ಪ್ರಾರಂಭದ ದಿನಗಳಿಂದ ಜೊತೆಗಿದ್ದು ಕಾರ್ಯವ್ಯಾಪ್ತಿ ಮತ್ತು ಚಟುವಟುಕೆಗಳನ್ನು ವಿಸ್ತರಿಸಲು ಅಗತ್ಯ ಸಹಕಾರ ಮತ್ತು ಮಾರ್ಗದರ್ಶನ ಮಾಡಿದ ಸಂಸ್ಥೆಯ ನಿರ್ದೇಶಕ ಮಂಡಳಿಯ ಸದಸ್ಯರಿಗೂ, ದಾನಿ ಸಂಸ್ಥೆಗಳಿಗೂ ಮತ್ತು ಸಂಸ್ಥೆಯ ಸಿಬ್ಬಂದಿಗಳಿಗೆ ಈ ಮೂಲಕ ಧನ್ಯವಾದಗಳನ್ನು ಹೇಳುತ್ತಿದ್ದೇನೆ.

ಧನ್ಯವಾದಗಳೊಂದಿಗೆ....
**ಗಣಪತಿ ಭಟ್ಟ**
ನಿರ್ದೇಶಕರು, ಮನುವಿಕಾಸ ಸಂಸ್ಥೆ




ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ಶಶಿಭೂಷಣ ಹೆಗಡೆ ಮಾತನಾಡಿ, ವರ್ಷದಿಂದ ವರ್ಷಕ್ಕೆ ಮಹಿಳಾ ಸಮಾವೇಶಕ್ಕೆ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿದ್ದು ಇದು ಸಂತಸದ ವಿಚಾರವಾಗಿದೆ. ಭಾರತದಲ್ಲಿ ದುಡಿಯುವ ಜನತೆಯ ಸರಾಸರಿ ವಯಸ್ಸು 35 ಆಗಿದ್ದು, ಇದರ ಸದುಪಯೋಗವನ್ನು ಸರಿಯಾಗಿ ಬಳಸಿಕೊಂಡಾಗ ದೇಶದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ ಎಂದು ಕಾರ್ಯಕ್ರಮಕ್ಕೆ ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಹತ್ತಕ್ಕೂ ಹೆಚ್ಚಿನ ಸ್ವ ಸಹಾಯ ಸಂಘಗಳನ್ನು ಹಾಗೂ ಸ್ವ ಉದ್ಯಮದಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಗೌರವಿಸಿಲಾಯಿತು.













ಸಮಾವೇಶದಲ್ಲಿ ಮಹಿಳಾ ಸಬಲೀಕರಣ, ಆರ್ಥಿಕ ಸಬಲತೆ, ಮಹಿಳೆಯರಲ್ಲಿ ನಾಯಕತ್ವದ ಗುಣದ ವೃದ್ಧಿ, ಕಾನೂನಿನ ಅರಿವು, ಹಣದ ಉಳಿತಾಯ, ಸ್ವ ಉದ್ಯಮಶೀಲತೆ  ಸೇರಿದಂತೆ ಹಲವು ವಿಷಯಗಳ ಬಗ್ಗೆ ಸಂವಾದ ಕಾರ್ಯಕ್ರಮಗಳು ನಡೆದವು. ಮಹಿಳೆಯರು ಒಂದೇ ಸೂರಿನ ಅಡಿಯಲ್ಲಿ ತಮ್ಮ ಅನುಭವಗಳ ಹಂಚಿಕೆಯ ಜೊತೆಗೆ ಹೊಸ ವಿಷಯಗಳನ್ನು ತಿಳಿಯಲು ಮತ್ತು ಅಳವಡಿಸಿಕೊಳ್ಳಲು ಸಮಾವೇಶ ವೇದಿಕೆಯನ್ನು ಒದಗಿಸಿಕೊಟ್ಟಿತು.

ಸಮಾವೇಶದಲ್ಲಿ ಸ್ವ ಸಹಾಯ ಸಂಘದ ಮಹಿಳೆಯರು ಬೆಳೆದ ಸಾವಯುವ ತರಕಾರಿ, ಗೃಹ ಉದ್ಯಮ ಉತ್ಪನ್ನಗಳ ಮಾರಾಟ ಮಳಿಗೆಗಳನ್ನು ಹಾಕಲಾಗಿತ್ತು. ಸ್ವ- ಸಹಾಯ ಸಂಘಗಳ ಸದಸ್ಯರುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹ ನಡೆದವು. ಈ ಕಾರ್ಯಕ್ರಮದಲ್ಲಿ ಮಾಬ್ಲೇಶ್ವರ ನಾಯ್ಕ, ಗ್ರೀನ್ ಕೇರ್ ಸಂಸ್ಥೆಯ ಜಿತೇಂದ್ರ ಕುಮಾರ್, ಸಾಮಾಜಿಕ ಕಾರ್ಯಕರ್ತ ಉಮೇಶ್ ನಾಯ್ಕ,  ಸಿದ್ದಾಪುರ ತಾಲೂಕಾ ಸಿಡಿಪಿಓ ಶ್ರೀಮತಿ ಪೂರ್ಣಿಮಾ ಹಾಗೂ 1000  ಕ್ಕೂ ಹೆಚ್ಚಿನ ಮನುವಿಕಾಸ  ಸ್ವ ಸಹಾಯ ಸಂಘದ ಮಹಿಳೆಯರು ಉಪಸ್ಥಿತರಿದ್ದರು.



## ಮಾದರಿ ಸ್ವ-ಸಹಾಯ ಸಂಘಗಳು

| | |
|---|---|
| ಶಾರದಾ ಸ್ವ-ಸಹಾಯ ಸಂಘ, ಶಾನಬಾಳೆಗದ್ದೆ | ಮಂಜುನಾಥ ಸ್ವ-ಸಹಾಯ ಸಂಘ, ಮುಟ್ಟಳ್ಳಿ |
| ಚೌಡೇಶ್ವರಿ ಸ್ವ-ಸಹಾಯ ಸಂಘ, ಕೋಲಸಿರ್ಸಿ | ಭೈರವ ಸ್ವ-ಸಹಾಯ ಸಂಘ, ಕಾನಗೋಡ |
| ವೇಂಕಟೇಶ್ವರ ಸ್ವ-ಸಹಾಯ ಸಂಘ, ಕನ್ನಳ್ಳಿ | ರೇಣುಕಾಂಬಾ ಸ್ವ-ಸಹಾಯ ಸಂಘ, ಅರೆಂದೂರು |
| ಶುಭಲಕ್ಷ್ಮೀ ಸ್ವ-ಸಹಾಯ ಸಂಘ, ಅರೆಂದೂರು | ಅನುಶ್ರೀ ಸ್ವ-ಸಹಾಯ ಸಂಘ, ಮಾವಿನಗುಂಡಿ |
| ಚೌಡೇಶ್ವರಿ ಸ್ವ-ಸಹಾಯ ಸಂಘ, ಹಿರೇಮಗ್ಗಿ | ರೇಣುಕಾಂಬಾ ಸ್ವ-ಸಹಾಯ ಸಂಘ, ಕೊಳಗಿ |
| ಆದಿಶಕ್ತಿ ಸ್ವ-ಸಹಾಯ ಸಂಘ, ಮೆಣಸಿ | ಶಾರದಾಂಬಾ ಸ್ವ-ಸಹಾಯ ಸಂಘ, ಹೊಸೂರು |
| ಚೈತನ್ಯ ಸ್ವ-ಸಹಾಯ ಸಂಘ, ಕೋಲಸಿರ್ಸಿ | ಪಂಚಮಿ ಸ್ವ-ಸಹಾಯ ಸಂಘ, ಹಾರೆಗೊಪ್ಪ |
| ಶ್ರೀ ಗಣೇಶ ಸ್ವ-ಸಹಾಯ ಸಂಘ, ಹೇರವಳ್ಳಿ | |

## ಸ್ವ- ಉದ್ಯಮಶೀಲರು

| | |
|---|---|
| ಶ್ರೀಮತಿ ದಿವ್ಯಾ ರಾಘವೇಂದ್ರ ನಾಯ್ಕ,<br>ಕೋಲಸಿರ್ಸಿ-ಕಿರಾಣಿ ಅಂಗಡಿ, ಕೇಟರಿಂಗ್, ಹೊಲಿಗೆ | ಶ್ರೀಮತಿ ನೇತ್ರಾವತಿ ಬಡಗಿ, ಅರೆಂದೂರ್ - ಬತ್ತಿ ಮಶಿನ್ |
| ಶ್ರೀಮತಿ ಕಲಾವತಿ ಗೊಂಡ, ಅರಳಿಹೊಂಡ-<br>ಗ್ರಾಮ ಪಂಚಾಯತಿಯಲ್ಲಿ ಸ್ವಚ್ಛತಾ ವಾಹನ ಚಾಲನೆ | ಶ್ರೀಮತಿ ಉಷಾ ಮಡಿವಾಳ, ಅರೆಂದೂರ್-<br>ಕೋಳಿ ಸಾಕಣೆ, ಜೇನು ಪೆಟ್ಟಿಗೆ, ಡೈರಿ |

## : ಮನುವಿಕಾಸ ಸಂಸ್ಥೆಯು ಈ ಕೆಳಕಂಡ ಉದ್ದೇಶಗಳೊಂದಿಗೆ ಮಹಿಳಾ ಸಮಾವೇಶವನ್ನು ಆಯೋಜಿಸುತ್ತಿದೆ :

* ಮಹಿಳೆಯರಿಗೆ ಸ್ವಾವಲಂಬನೆಯ ಕುರಿತು ಅರಿವು ಮೂಡಿಸಲು ಸಹಾಯಕ.
* ಮಹಿಳೆಯರಿಗೆ ನಾಯಕತ್ವದ ಗುಣಗಳನ್ನು ಬೆಳೆಸಲು ವೇದಿಕೆಯನ್ನು ಒದಗಿಸಲು.
* ಮಹಿಳಾ ಉದ್ದಿಮೆಗಳು, ಸ್ವ-ಉದ್ಯೋಗ, ಹಾಗೂ ಸ್ವಾವಲಂಬನೆಯ ಕುರಿತು ಮಾಹಿತಿ ಹಂಚಿಕೊಳ್ಳಲು ಅವಕಾಶ ನೀಡಲು.
* ಮಹಿಳೆಯರ ಹಕ್ಕುಗಳು, ಸರ್ಕಾರದ ಯೋಜನೆಗಳು ಮತ್ತು ಕಾನೂನು ಮೌಲ್ಯಗಳನ್ನು ಅರಿಯಲು ಸಹಾಯಕ.
* ಲೈಂಗಿಕ ಸಮಾನತೆ, ಮಹಿಳಾ ಸುರಕ್ಷತೆ, ಮತ್ತು ಕುಟುಂಬ ಹಿತಾಸಕ್ತಿ ಕಾಪಾಡುವ ಬಗ್ಗೆ ಶಿಕ್ಷಣ ನೀಡುತ್ತದೆ.
* ಮಹಿಳಾ ಸ್ವ-ಉದ್ಯೋಗ, ಕೈಗಾರಿಕೆ, ಮತ್ತು ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿ ನೀಡುತ್ತದೆ.
* ಕೈತೋಟ, ಪಶುಸಂಗೋಪನೆ, ಹೊಲಿಗೆ ಮತ್ತು ಸಣ್ಣ ಉದ್ಯಮಗಳ ಬಗ್ಗೆ ತರಬೇತಿ ಒದಗಿಸಲು ಸಹಕಾರಿ.
* ಮಹಿಳೆಯರ ಆರೋಗ್ಯ, ಪೋಷಣಾ ಆಹಾರ, ಮತ್ತು ಮನುವಿಕಾಸದ ಬಗ್ಗೆ ಅರಿವು ಮೂಡಿಸುತ್ತದೆ.
* ತಾಯಿ-ಮಗು ಆರೈಕೆ, ಕುಟುಂಬದ ಸಮಗ್ರ ಅಭಿವೃದ್ಧಿ, ಮತ್ತು ಮಹಿಳಾ ಆರೋಗ್ಯ ಸೇವೆಗಳ ಲಭ್ಯತೆ ಬಗ್ಗೆ ಚರ್ಚೆ ಮಾಡಲು ವೇದಿಕೆಯಾಗುತ್ತದೆ.
* ವಿವಿಧ ಮಹಿಳೆಯರ ಅನುಭವಗಳು, ಯಶಸ್ವಿನ ಕಥೆಗಳು, ಮತ್ತು ಸವಾಲುಗಳನ್ನು ಹೇಗೆ ಎದುರಿಸಬೇಕು ಎಂಬ ಕುರಿತು ಚರ್ಚಿಸಲು ಅವಕಾಶ.
* ಮಹಿಳೆಯರು ಪರಸ್ಪರ ಸಹಾಯ ಮಾಡಿಕೊಳ್ಳಲು ಮತ್ತು ಸಮುದಾಯದಲ್ಲಿ ಬದಲಾವಣೆ ತರಲು ಅನುಕೂಲವಾಗುತ್ತದೆ.
* ಸಾಮಾಜಿಕ ಬದಲಾವಣೆ ಮತ್ತು ಸಮಾನತೆಯ ಬಗೆಗೆ ಜಾಗೃತಿ ಮೂಡಿಸಲು
  ಗಂಡು-ಹೆಣ್ಣಿನ ಸಮಾನತೆ, ಮಹಿಳಾ ಹಕ್ಕುಗಳ ಕುರಿತ ಚರ್ಚೆ, ಮತ್ತು ಸಾಮಾಜಿಕ ಅಡೆತಡೆಗಳನ್ನು ಒಡೆದು ಹಾಕಲು ಸಹಾಯಕ.
* ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಲೈಂಗಿಕ ಹಿಂಸೆ, ಮತ್ತು ಭೇದಭಾವದ ವಿರುದ್ಧ ಹೋರಾಡಲು ಬಲ ನೀಡುತ್ತದೆ.

# ಮನುವಿಕಾಸ ಸಂಸ್ಥೆಯಿಂದ ಮಹಿಳೆಯರಿಗಾಗಿ ಕೌಶಲ್ಯಾಧಾರಿತ ತರಬೇತಿಗಳ ಆಯೋಜನೆ

ಮಹಿಳೆಯರಿಗೆ ಸಮಾಜದಲ್ಲಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವೆನ್ನುವುದನ್ನು ಸಾಧಿಸಿ ತೋರಿಸಲು ಮನುವಿಕಾಸ ಸಂಸ್ಥೆ ಈಡಲ್‌ಗೀವ್ ಫೌಂಡೇಶನ್‌ನ ಸಹಯೋಗದೊಂದಿಗೆ 2018ರಿಂದ ಮಹಿಳಾ ಸಬಲೀಕರಣ ಮತ್ತು ಸ್ವಾವಲಂಬನೆಯನ್ನೇ ಮುಖ್ಯ ಗುರಿಯನ್ನಾಗಿರಿಸಿಕೊಂಡು ಸಮಾಜಮುಖಿ ಕೆಲಸವನ್ನು ಮಾಡಲು, ಮಹಿಳೆಯರಿಗಾಗಿಯೇ ಆರ್ಥಿಕ ಸ್ವಾವಲಂಬನೆ, ಶಿಕ್ಷಣ, ಉದ್ಯಮಶೀಲತಾ ಅಭಿವೃದ್ಧಿ ಮನೋಭಾವನೆಯನ್ನು ಬೆಳೆಸಲು ಹತ್ತು ಹಲವಾರು ನೂತನ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಪ್ರಸ್ತುತ ಸಂಸ್ಥೆಯು 'ನಾರಿ ಶಕ್ತಿ ಗ್ರೀನ್‌ವೇ' ಯೋಜನೆಯ ಅಡಿಯಲ್ಲಿ ಮಹಿಳೆಯರಿಗಾಗಿ ಹಲವಾರು ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ.

## ಮನುವಿಕಾಸ ಸಂಸ್ಥೆ ಮತ್ತು ಈಡಲ್‌ಗೀವ್ ಫೌಂಡೇಶನ್‌ನ ಸಹಯೋಗದೊಂದಿಗೆ ಆಯೋಜಿಸಲಾದ ಕೌಶಲ್ಯಾಧಾರಿತ ತರಬೇತಿಗಳ ಮಾಹಿತಿ

**(ಜನವರಿ – 2025, ಮಾರ್ಚ್ – 2025)**

### ಒಕ್ಕೂಟ ಸಭೆ

**ಸ್ವ– ಸಹಾಯ ಸಂಘಗಗಳ ಒಕ್ಕೂಟ ಸಭೆಗಳ ಮಹತ್ವ :**



* ಮಹಿಳೆಯರಲ್ಲಿ ಆರ್ಥಿಕ ಸ್ವಾವಲಂಬನೆಯನ್ನು ಉತ್ತೇಜಿಸಲು ಸಹಕಾರಿಯಾಗಿವೆ.
* ಈ ಸಭೆಗಳ ಮೂಲಕ ಸ್ವ– ಸಹಾಯ ಸಂಘಗಳು ಪರಸ್ಪರ ಸಹಾಯ ಮತ್ತು ಸಹಕಾರವನ್ನು ಹಂಚಿಕೊಳ್ಳುತ್ತವೆ
* ಸದಸ್ಯರಿಗೆ ತರಬೇತಿ, ಜ್ಞಾನದ ಹಂಚಿಕೆ, ಕೌಶಲ್ಯ ವಿಕಸನ ಮತ್ತು ಹೊಸ ಮಾರ್ಗದರ್ಶಿಗಳನ್ನು ನೀಡುವ ವೇದಿಕೆಗಳಾಗಿ ಒಕ್ಕೂಟ ಸಭೆಗಳು ಕೆಲಸ ಮಾಡುತ್ತವೆ.
* ಸದಸ್ಯರು ನೀಡುವ ಸಲಹೆ ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಮೂಲಕ, ಒಕ್ಕೂಟಗಳು ತಮ್ಮ ಸಂಘಟನೆಯ ಕಾರ್ಯವಿಧಾನಗಳನ್ನು ಉತ್ತಮವಾಗಿ ರೂಪಿಸಬಹುದು.
* ಒಕ್ಕೂಟ ಸಭೆಗಳು ಸದಸ್ಯರ ನಡುವೆ ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿಸುತ್ತವೆ ಹಾಗೂ ಬಡತನ ನಿವಾರಣೆಗೆ ಸಹಕಾರ ನೀಡುವ ಹಲವು ಯೋಜನೆಗಳನ್ನು ರೂಪಿಸುವಲ್ಲಿ ಸಹಕಾರಿಯಾಗುತ್ತವೆ.

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 11–02–2025 | ಕೊಲಸಿರ್ಸಿ | 60 |
| 2 | 17–02–2025 | ಕುಬಿಹಾಳ | 62 |
| 3 | 23–02–2025 | ಕೊಡ್ಲಣಿ | 46 |
| 4 | 24–02–2025 | ಗರಗ | 28 |
| 5 | 25–02–2025 | ಅರಳಿಕಟ್ಟೆ | 40 |
| 6 | 25–02–2025 | ಅವರ್ಸಾ | 38 |
| 7 | 25–02–2025 | ಬನವಾಸಿ | 60 |
| 8 | 01–03–2025 | ಹೊನ್ನಾವರ | 42 |
| 9 | 03–03–2025 | ಗುಂಡೊಳ್ಳಿ | 55 |

## ಸ್ವ ಸಹಾಯ ಸಂಘಗಳ ಪರಿಕಲ್ಪನಾ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 24–02–2025 | ಗರಗ | 37 |
| 2 | 28–2–2025 | ಮುಡಗೇರಿ, ಕಾರವಾರ | 47 |
| 3 | 15–3–2025 | ಹೊಂಕಣ | 40 |

## ಹೈನುಗಾರಿಕೆ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 03–01–2025 | ಕುಬಿಹಾಳ | 54 |
| 2 | 01–03–2025 | ಹಸರಗೋಡ | 50 |
| 3 | 10–03–2025 | ಗಂಗೆಕೊಳ್ಳ | 59 |

### ಮಹಿಳೆಯರಿಗಾಗಿ ಹೈನುಗಾರಿಕೆ ಅಭಿವೃದ್ಧಿ ತರಬೇತಿಯ ಆಯೋಜನೆಯ ಮಹತ್ವ :

* ಹೈನುಗಾರಿಕೆಯಿಂದ ಮಹಿಳೆಯರಿಗೆ ಸ್ಥಿರ ಆದಾಯ ದೊರೆಯುತ್ತದೆ, ಇದರಿಂದ ಕುಟುಂಬದ ಆರ್ಥಿಕ ಸ್ಥಿರತೆ ಸುಧಾರಿಸುತ್ತದೆ.
* ಕಡಿಮೆ ವೆಚ್ಚದಲ್ಲಿ ಹೆಚ್ಚು ಹಾಲು ಉತ್ಪಾದನೆ ಮಾಡುವ ಮಾರ್ಗಗಳನ್ನು ತಿಳಿಯಲು ತರಬೇತಿ ಸಹಾಯ ಮಾಡುತ್ತದೆ.
* ಸಣ್ಣ ಪ್ರಮಾಣದ ಹೈನುಗಾರಿಕೆ ವಹಿವಾಟು ಆರಂಭಿಸಲು ಪ್ರೋತ್ಸಾಹ ನೀಡುತ್ತದೆ.
* ಮಹಿಳೆಯರು ಸ್ವಾವಲಂಬಿ ಉದ್ಯೋಗದ ಮೂಲಕ ಜೀವನೋಪಾಯ ಕಂಡುಕೊಳ್ಳಬಹುದು.
* ಹೈನುಗಾರಿಕೆ ಚಟುವಟಿಕೆ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಉತ್ತಮ ಉದ್ಯೋಗದ ಅವಕಾಶ ಒದಗಿಸುತ್ತದೆ.
* ಹಾಲು ಮತ್ತು ಹಾಲು ಉತ್ಪನ್ನಗಳು ಕುಟುಂಬದ ಪೌಷ್ಟಿಕತೆ ಹೆಚ್ಚಿಸುತ್ತವೆ, ವಿಶೇಷವಾಗಿ ಮಕ್ಕಳ ಆರೋಗ್ಯಕ್ಕೆ ಬಹಳ ಉಪಯುಕ್ತ.
* ಹಾಲು ಉತ್ಪಾದನೆ ಹೆಚ್ಚುವುದರಿಂದ ಮನೆಯ ಆಹಾರ ಭದ್ರತೆ ಸುಧಾರಿಸುತ್ತದೆ.
* ಹಾಲು ಉತ್ಪಾದನೆಯು ಸ್ಥಳೀಯ ಮಾರುಕಟ್ಟೆ ಮತ್ತು ಸರಬರಾಜು ವ್ಯವಸ್ಥೆಗೆ ಸಹಾಯ ಮಾಡುತ್ತದೆ.
* ಮಹಿಳೆಯರ ನೇತೃತ್ವದಲ್ಲಿ ಹೈನುಗಾರಿಕೆ, ಕೃಷಿ ಆಧಾರಿತ ಆರ್ಥಿಕತೆಯನ್ನು ಸದೃಢಗೊಳಿಸುತ್ತದೆ.
* ಹಾಲು ಉತ್ಪಾದನೆ, ಕರುವಿನ ಆರೈಕೆ, ಮೇವು ಬೆಳೆಸುವ ತಂತ್ರಗಳ ಬಗ್ಗೆ ತರಬೇತಿ ನೀಡುವುದು.
* ಹಾಲಿನಿಂದ ಮತ್ತಷ್ಟು ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿ ಆದಾಯ ಹೆಚ್ಚಿಸಬಹುದು.
* ಹೈನುಗಾರಿಕಾ ತರಬೇತಿ ಮಹಿಳೆಯರಿಗೆ ಗ್ರಾಮೀಣ ಕೃಷಿ ಕ್ಷೇತ್ರದಲ್ಲಿ ನಾಯಕತ್ವದ ಸ್ಥಾನ ಪಡೆಯಲು ಸಹಕಾರಿಯಾಗಿದೆ.
* ಹಣಕಾಸು ನಿರ್ವಹಣೆ ಮತ್ತು ಕೃಷಿ ತೀರ್ಮಾನಗಳಲ್ಲಿನ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುತ್ತದೆ.
* ತರಬೇತಿ ನೀಡುವ ಮೂಲಕ ಸಾವಯವ ಮೇವು, ಗೋಮಯ ಮತ್ತು ಹಸಿರು ತಳಿಗಳ ನಿರ್ವಹಣೆಯ ಬಗ್ಗೆ ಅರಿವು ಮೂಡಿಸಲಾಗುತ್ತದೆ.
* ಸೂಕ್ತ ತ್ಯಾಜ್ಯ ನಿರ್ವಹಣಾ ತಂತ್ರಗಳು ಹೈನುಗಾರಿಕೆಯ ಪರಿಣಾಮವನ್ನು ಹೆಚ್ಚಿಸುತ್ತವೆ.







## ಗ್ರಾಮೀಣ ಮಹಿಳೆಯರಿಗೆ ಸುಸ್ಥಿರ ಕೃಷಿ ಅಭಿವೃದ್ಧಿ ತರಬೇತಿಯ ಮಹತ್ವ

- ಗ್ರಾಮೀಣ ಮಹಿಳೆಯರಿಗೆ ಸಾವಯವ ಕೃಷಿ ಮತ್ತು ತಾಂತ್ರಿಕ ಕೃಷಿ ತರಬೇತಿ ನೀಡುವುದು, ಮಹಿಳಾ ಸಮುದಾಯದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಸಹಾಯ ಮಾಡುತ್ತದೆ. ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಮೂಲಕ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಯಾಗಿ ತಮ್ಮ ಕುಟುಂಬವನ್ನು ಬೆಳೆಸಲು ಸಹಾಯ ಮಾಡಬಹುದು.
- ಪರಿಸರ ಸ್ನೇಹಿ ಕೃಷಿ ಮತ್ತು ಸಾವಯವ ಪದ್ಧತಿಗಳ ಕುರಿತು ಅರಿವು ಪಡೆಯಲು, ಮಹಿಳೆಯರು ಉತ್ತಮ ಕೃಷಿ ವಿಧಾನಗಳನ್ನು ಬಳಸುವ ಮೂಲಕ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಬಹುದು.
- ತಾಂತ್ರಿಕ ತರಬೇತಿಯು ಮಹಿಳೆಯರಿಗೆ ಜೈವಿಕ ಕೀಟ ನಿಯಂತ್ರಣ, ಸಸಿಯ ಜ್ಞಾನ, ನೆನೆಸುವಿಕೆ ವಿಧಾನಗಳು ಮತ್ತು ಹವಾಮಾನ ನಿಯಂತ್ರಣಗಳನ್ನು ಕಲಿಸಲು ಸಹಾಯ ಮಾಡುತ್ತದೆ, ಇದು ಹೆಚ್ಚಿನ ಬೆಳೆಯ ರಕ್ಷಣೆ ಮತ್ತು ಉತ್ತಮ ಬೆಳೆಯ ಉತ್ಪಾದನೆಗೆ ದಾರಿ ತೋರಿಸುತ್ತದೆ.
- ಸಾವಯವ ಕೃಷಿ ಮತ್ತು ದಕ್ಷ ನೀರಿನ ಬಳಕೆಯ ಕೃಷಿ ಪದ್ಧತಿಗಳು ಪರಿಸರದ ಮೇಲೆ ಹಾನಿಯನ್ನು ಕಡಿಮೆ ಮಾಡುತ್ತದೆ ಮತ್ತು ಹವಾಮಾನದಲ್ಲಿ ವಿಪರೀತ ಬದಲಾವಣೆಗಳನ್ನು ತಡೆಯಲು ಕಾರಣವಾಗುತ್ತದೆ.
- ಕ್ರಿಯಾತ್ಮಕವಾಗಿ ಕೃಷಿ ಕ್ಷೇತ್ರದಲ್ಲಿ ಮಹಿಳೆಯರು ಪಾಲ್ಗೊಳ್ಳುವ ಮೂಲಕ ಅವರ ಸಬಲೀಕರಣವನ್ನು ಹೆಚ್ಚಿಸಲು ನೆರವಾಗುತ್ತದೆ. ಇದರಿಂದ ಅವರು ಹೆಚ್ಚು ಸ್ವಾವಲಂಬಿ ಮತ್ತು ಸಂಘಟಿತವಾಗಿರುತ್ತಾರೆ.
- ಗ್ರಾಮೀಣ ಮಹಿಳೆಯರು ತಮ್ಮ ಕುಟುಂಬಗಳು ಮತ್ತು ಸಮುದಾಯದ ಹಿತಕ್ಕಾಗಿ ನೈತಿಕ ಜವಾಬ್ದಾರಿಯನ್ನು ತೆಗೆದುಕೊಳ್ಳುವಂತಾಗುತ್ತಾರೆ ಮತ್ತು ಕ್ರಿಯಾಶೀಲ ಕೃಷಿ ತರಬೇತಿ ಇವರನ್ನು ಪರಿಸರ ಮತ್ತು ಸಮುದಾಯ ಪಾಲನೆ ಬಗ್ಗೆ ಹೆಚ್ಚು ಜಾಗರೂಕವಾಗಿ ಮಾಡುತ್ತದೆ.
- ಸಾವಯವ ಮತ್ತು ಸಮಗ್ರ ಕೃಷಿ ಪದ್ಧತಿಗಳಿಂದ ಮಹಿಳೆಯರು ತಾವು ಬೆಳೆದ ಆಹಾರವನ್ನು ಬಳಸಿಕೊಂಡು ಕುಟುಂಬದ ಆಹಾರ ಸುರಕ್ಷತೆಯನ್ನು ಹೆಚ್ಚಿಸಬಹುದು. ಇದರಿಂದ ಹೆಚ್ಚಿನ ಪೋಷಕಾಂಶಗಳನ್ನು ಹೊಂದಿರುವ ಆಹಾರಗಳನ್ನು ಬೆಳೆಸಲು ಸಹಾಯ ಮಾಡುತ್ತದೆ.
- ಈ ರೀತಿಯ ಕೃಷಿ ತರಬೇತಿಗಳು ಮತ್ತು ಚಟುವಟಿಕೆಗಳು ಸಮುದಾಯದ ಅಭಿವೃದ್ಧಿಗೆ, ಹೊಸ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ನಿರ್ಮಾಣಕ್ಕೆ ಸಹಾಯ ಮಾಡುತ್ತವೆ.
- ಮಹಿಳೆಯರಿಗೆ ಬೇಕಾದ ತರಬೇತಿಯನ್ನು ಸರಿಯಾದ ಸಮಯದಲ್ಲಿ ಮತ್ತು ಸರಿಯಾದ ರೀತಿಯಲ್ಲಿ ನೀಡುವುದರಿಂದ, ಗ್ರಾಮೀಣ ಮಹಿಳೆಯರು ತಮ್ಮ ಕೃಷಿಯ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸಬಹುದು ಮತ್ತು ಕುಟುಂಬದಲ್ಲಿ ಇದು ಆರ್ಥಿಕ ಭದ್ರತೆಯನ್ನು ಒದಗಿಸುತ್ತದೆ.

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 20–02–2025 | ಮುಂಡಗೋಡ | 39 |
| 2 | 21–02–2025 | ಬೆಣಚಿ | 46 |
| 3 | 22–02–2025 | ಮಾಳಂಜಿ | 51 |
| 4 | 15–03–2025 | ಸಾಂಬ್ರಾಣೆ | 40 |

### ಕೈ ತೋಟ ನಿರ್ವಹಣೆ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 22–02–2025 | ಕುಮಟಾ | 30 |

## ಕೋಳಿ ಮರಿ ವಿತರಣೆ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 10-01-2025 | ಹಾನಗಲ್ | 30 |
| 2 | 16-01-2025 | ಹಳಿಯಾಳ, ಜೊಯಿಡಾ ದಾಂಡೇಲಿ, ಅಳ್ನಾವರ | 67 |
| 3 | 28-01-2025 | ಮುಂಡಗೋಡ | 23 |
| 4 | 07-03-2025 | ಹಳಿಯಾಳ | 36 |
| 5 | 12-02-2025 | ಶಿರಸಿ | 70 |

## ಜೇನು ಪೆಟ್ಟಿಗೆ ವಿತರಣೆ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 13-02-2025 | ಕುಮಟಾ | 20 |
| 2 | 14-02-2025 | ಕಲಘಟಗಿ | 15 |
| 3 | 21-02-2025 | ಸಿದ್ದಾಪುರ | 17 |
| 4 | 03-03-2025 | ಅಳ್ನಾವರ | 12 |
| 5 | 11-03-2025 | ಜೋಯಿಡಾ | 15 |

## ಲೆಕ್ಕಪತ್ರ ಹಾಗೂ ಕಛೇರಿ ನಿರ್ವಹಣಾ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 15-11-2024 ರಿಂದ 22-01-2025 | ಹಳಿಯಾಳ | 33 |
| 2 | 22-11-2024 ರಿಂದ 17-02-2025 | ಯಲ್ಲಾಪುರ | 27 |

## ಸುಧಾರಿತ ಹೊಲಿಗೆ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 01-09-2024 ರಿಂದ 19-11-2024 | ಶಿರಸಿ | 22 |
| 2 | 12-12-2024 ರಿಂದ 22-02-2025 | ಕಲಘಟಗಿ | 19 |

## ಹೋಲಿಗೆ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 25-12-2025 | ಹೊನ್ನಾವರ | 33 |
| 2 | 25-01-2025 | ಯಲ್ಲಾಪುರ | 30 |
| 3 | 13-03-2025 | ಮುರ್ಕವಾಡ | 35 |

## ವೀಡಿಯೊ ಎಡಿಟಿಂಗ್ ಟ್ರೈನಿಂಗ್

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 04-03-2025 | ಶಿರಸಿ | 13 |

## ಫೋಟೊಗ್ರಾಫಿ ವೀಡಿಯೊಗ್ರಾಫಿ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 25-02-2025 | ಹಳಿಯಾಳ | 25 |

## ಶಾಪ್ ಕೀಪಿಂಗ್, ರಿಟೈಲ್ ಮಾರ್ಕೆಟಿಂಗ್

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 05-03-2025 | ಹಳಿಯಾಳ | 30 |
| 2 | 01-03-2025 | ಕುಮಟಾ | 30 |

## ಕೆಟರಿಂಗ್ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 28-02-2025 | ಶಿರಸಿ | 24 |
| 2 | 11-03-2025 | ಹೊನ್ನಾವರ | 25 |

## ಸ್ವ-ಸಹಾಯ ಗುಂಪು ಸದಸ್ಯರಿಗೆ ಡಿಜಿಟಲ್ ಸಾಕ್ಷರತಾ ತರಬೇತಿ ನೀಡುವ ಮಹತ್ವ :

* **ಆರ್ಥಿಕ ಸ್ವಾಯತ್ತತೆ :** ಡಿಜಿಟಲ್ ಸಾಕ್ಷರತೆ ತಂತ್ರಜ್ಞಾನ ಬಳಕೆಯು ಆರ್ಥಿಕ ಸ್ವಾಯತ್ತತೆಯನ್ನು ಹೆಚ್ಚಿಸುತ್ತದೆ. ಆನ್‌ಲೈನ್ ಬ್ಯಾಂಕಿಂಗ್, ಹಣ ವರ್ಗಾವಣೆ ಮತ್ತು ಡಿಜಿಟಲ್ ಪಾವತಿಗಳನ್ನು ಸುಲಭಗೊಳಿಸಿ ಹಣಕಾಸು ನಿರ್ವಹಣೆಗೆ ಸಹಾಯ ಮಾಡುತ್ತದೆ ಮತ್ತು ಮೋಸವನ್ನು ಅಪಾರದರ್ಶಕತೆಯನ್ನು ಹೋಗಲಾಡಿಸುತ್ತದೆ.
* **ವ್ಯಾಪಾರ ವಿಸ್ತರಣೆ :** ಸ್ವ- ಸಹಾಯ ಸಂಘದ ಸದಸ್ಯರು ತಮ್ಮ ಉತ್ಪನ್ನಗಳನ್ನು ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಲ್ಲಿ ಮಾರಾಟ ಮಾಡಬಹುದು. ಇದರಿಂದ ವ್ಯಾಪಾರ ವಿಸ್ತರಣೆಯನ್ನು ಮಾಡಬಹುದು.
* **ಮಾಹಿತಿ ಕಲೆಹಾಕುವಿಕೆ :** ಸರ್ಕಾರಿ ಸೌಲಭ್ಯಗಳು, ರೈತ ಹಾಗೂ ಮಹಿಳಾ ಅಭಿವೃದ್ಧಿ ಯೋಜನೆಗಳ ಮಾಹಿತಿ ಡಿಜಿಟಲ್ ಮಾಧ್ಯಮದ ಮೂಲಕ ಸುಲಭವಾಗಿ ಲಭ್ಯವಾಗುತ್ತದೆ.
* **ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಲು ಸಹಾಯ :** ಡಿಜಿಟಲ್ ತಂತ್ರಜ್ಞಾನ ಬಳಸಿ ಸಾಮಾಜಿಕ ಮಾಧ್ಯಮ, ಯೂಟ್ಯೂಬ್, ಮತ್ತು ಶೈಕ್ಷಣಿಕ ವೆಬ್‌ಸೈಟ್‌ಗಳ ಮೂಲಕ ಹೊಸ ವಿಷಯಗಳನ್ನು ಕಲಿಯಬಹುದು.
* **ಇ-ಆಡಳಿತ ಮತ್ತು ಸೇವೆಗಳು :** ಆಧಾರ್, ಪಾನ್, ವೋಟರ್ ಐಡಿ, ಇ-ಕಿಸಾನ್, ಮೆಡಿಕಲ್ ಸೌಲಭ್ಯಗಳು ಇತ್ಯಾದಿ ಸೇವೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು ಸುಗಮವಾಗುತ್ತದೆ.
* **ಸುರಕ್ಷಿತ ಹಣಕಾಸು ವಹಿವಾಟು :** ಆನ್‌ಲೈನ್ ಬ್ಯಾಂಕಿಂಗ್, ಯುಪಿಐ ಪಾವತಿ ಮತ್ತು ಡಿಜಿಟಲ್ ವಹಿವಾಟುಗಳನ್ನು ಬಳಸುವುದರಿಂದ ಹಣಕಾಸು ವ್ಯವಹಾರಗಳು ಹೆಚ್ಚು ಸುರಕ್ಷಿತವಾಗಿರುತ್ತವೆ.
* **ಮಹಿಳಾ ಸಬಲೀಕರಣ :** ಡಿಜಿಟಲ್ ತಂತ್ರಜ್ಞಾನ ಉಪಯೋಗಿಸುವ ಮೂಲಕ ಮಹಿಳೆಯರು ಸ್ವತಂತ್ರವಾಗಿ ಕಾರ್ಯನಿರ್ವಹಿಸಬಹುದು, ಉದ್ಯೋಗಾವಕಾಶಗಳನ್ನು ಹುಡುಕಬಹುದು ಮತ್ತು ಉದ್ದಿಮೆಗಳನ್ನೂ ಪ್ರಾರಂಭಿಸಬಹುದು.

## ಲೆಕ್ಕಪತ್ರ ಹಾಗೂ ಕಛೇರಿ ನಿರ್ವಹಣಾ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 15-11-2024-22-01-2025 | ಹಳಿಯಾಳ | 33 |
| 2 | 22-11-2024-17-02-2025 | ಯಲ್ಲಾಪುರ | 27 |

## ಸುಧಾರಿತ ಹೊಲಿಗೆ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 01-09-2024-19-11-2024 | ಶಿರಸಿ | 22 |
| 2 | 12-12-2024-22-02-2025 | ಕಲಘಟಗಿ | 19 |

## ಹೋಲಿಗೆ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 25-12-2025 | ಹೊನ್ನಾವರ | 33 |
| 2 | 25-01-2025 | ಯಲ್ಲಾಪುರ | 30 |

## ವೀಡಿಯೊ ಎಡಿಟಿಂಗ್ ಟ್ರೈನಿಂಗ್

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 04-03-2025 | ಶಿರಸಿ | 13 |

## ಫೋಟೊಗ್ರಾಫಿ ವೀಡಿಯೊಗ್ರಾಫಿ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 25-02-2025 | ಹಳಿಯಾಳ | 25 |

## ಶಾಪ್ ಕೀಪಿಂಗ್, ರಿಟೈಲ್ ಮಾರ್ಕೆಟಿಂಗ್

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 05-03-2025 | ಹಳಿಯಾಳ | 30 |
| 2 | 01-03-2025 | ಕುಮಟಾ | 30 |






CATERING TRAINING





Project : Nari - Shakti Greenway
SRI PADDY TRAINING


Project: Nari-Shakti Greenway


Project: Nari-Shakti Greenway
HONEYBEE BOX DISTRIBUTION


CHICKS DISTRIBUTION TO SHG MEMBER
ಕೋಳಿ ಮರಿ ವಿತರಣೆ


CATERING TRAINING


TAILORING TRAINING




Project : Nari-Shakti Greenway
CATERING TRAINING

## ಪ್ರಗತಿಮಿತ್ರ ರೈತ ಉತ್ಪಾದಕ ಕಂಪನಿಗೆ "FPO of the Year 2024" ರಾಷ್ಟ್ರೀಯ ಪ್ರಶಸ್ತಿ



### ಪ್ರಗತಿಮಿತ್ರ ನಾರ್ಥ ಕೆನರಾ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ, ಬಾಳೆಗದ್ದೆಗೆ ರಾಷ್ಟ್ರಮಟ್ಟದ ಎಫ್‌ಪಿಒ ಇಂಪ್ಯಾಕ್ಟ್ ಅವಾರ್ಡ್ ಮನ್ನಣೆ

ಮನುವಿಕಾಸ, ಸಂಸ್ಥೆಯ ಪ್ರಗತಿಮಿತ್ರ ನಾರ್ಥ್ ಕೆನರಾ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿಗೆ ರಾಷ್ಟ್ರಮಟ್ಟದ ಎಫ್‌ಪಿಒ ಇಂಪ್ಯಾಕ್ಟ್ ಅವಾರ್ಡ್ ಅನ್ನು ನವದೆಹಲಿಯಲ್ಲಿ ನಡೆದ ಲೈವ್ಲಿಹುಡ್ ಇಂಡಿಯಾ ಸಮಿಟ್‌ನಲ್ಲಿ ಪ್ರಧಾನ ಮಾಡಲಾಗಿದೆ.

ಗ್ರಾಮೀಣ ರೈತರು ಮತ್ತು ಮಹಿಳೆಯರ ಜೀವನದಲ್ಲಿ ಪರಿವರ್ತನೆ ತರಲು ಪ್ರಗತಿಮಿತ್ರ ಎನ್‌ಕೆಎಫ್‌ಪಿಸಿಎಲ್ ತಂಡ ಮಾಡಿದ ಶ್ರಮದ ಗೆಲುವು ಇದಾಗಿದೆ. ಈ ತಂಡವು ಮಲೆನಾಡಿನ ಮಸಾಲೆ ಪದಾರ್ಥಗಳ ಮೌಲ್ಯವರ್ಧನೆ, ಅಡಿಕೆ ಖರೀದಿ, ಮಾರಾಟ ಮತ್ತು ನಿರ್ವಹಣೆಯಲ್ಲಿ ಅನುಸರಿಸಿದ ನಾವೀನ್ಯತೆಯು 125ಕ್ಕೂ ಹೆಚ್ಚು ಗ್ರಾಮೀಣ ಮಹಿಳೆಯರ ಜೀವನಮಟ್ಟವನ್ನು ಅಭಿವೃದ್ಧಿಗೊಳಿಸಿದ್ದು, ಅತ್ಯಾಧುನಿಕ ಸಮುದಾಯ ಒಕ್ಕೂಟದ ಸಂಸ್ಕರಣಾ ಕೇಂದ್ರವನ್ನು ಸ್ಥಾಪಿಸಲು ಕಾರಣವಾಗಿದೆ.

ದೆಹಲಿಯಲ್ಲಿ ನಡೆದ 2 ದಿನದ (19/12/2024 ಮತ್ತು 20/12/2024) Livelihood Summitನಲ್ಲಿ ಈ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಪ್ರಗತಿಮಿತ್ರದ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ವಿವೇಕ್ ಹೆಗಡೆಯವರು ಪ್ರವರ್ತಕ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಅವರೊಂದಿಗೆ ಪ್ರಶಸ್ತಿಯನ್ನು ಸ್ವೀಕರಿಸಿದರು. ಸಿಬ್ಬಂದಿಗಳಾದ ಶ್ರೀ ಪ್ರಜ್ವಲ್ ಹೆಗಡೆ ಮತ್ತು ವಿನಯ ಗೋಪಾಲ್ ನಾಯ್ಕ ಇವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.






# ಪ್ರಗತಿಮಿತ್ರ ರೈತ ಉತ್ಪಾದಕ ಕಂಪನಿಗೆ 'Best Collective 2024' ರಾಷ್ಟ್ರ ಮಟ್ಟದ ಪ್ರಶಸ್ತಿ




ESAF ಫೌಂಡೇಶನ್ ಮತ್ತು ESAF ಸ್ಮಾಲ್ ಫೈನಾನ್ಸ ಬ್ಯಾಂಕ್ ಸಂಯುಕ್ತಾಶ್ರಯದಲ್ಲಿ ನೀಡಲ್ಪಡುವ 'Best Collective 2024' ರಾಷ್ಟ್ರೀಯ ಪ್ರಶಸ್ತಿಯನ್ನು ತಾಲೂಕಿನ ಬಾಳೆಗದ್ದೆಯ ಪ್ರಗತಿಮಿತ್ರ ರೈತ ಉತ್ಪಾದಕ ಕಂಪನಿಗೆ ನೀಡಲಾಗಿದೆ.

ದೇಶಾದ್ಯಂತ ಸುಮಾರು 182 ಸಂಸ್ಥೆಗಳನ್ನು ಮೌಲ್ಯಮಾಪನ ಮಾಡಿ 3 ಸಂಸ್ಥೆಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗಿದ್ದು, ಕೇರಳದ ತ್ರಿಶೂರ್‌ನಲ್ಲಿ ಪ್ರಶಸ್ತಿಯ ಪ್ರಧಾನ ಸಮಾರಂಭವನ್ನು ಆಯೋಜಿಸಲಾಗಿತ್ತು.

ESAF ಫೌಂಡೇಶನ್ ಮತ್ತು ಸ್ಮಾಲ್ ಫೈನಾನ್ಸ ಬ್ಯಾಂಕ್‌ನ ಮ್ಯಾನೆಜಿಂಗ್ ಡೈರೆಕ್ಟರ್ ಮತ್ತು ಸಿ.ಇ.ಓ. ಪೌಲ್‌ಥಾಮಸ್, ರಿಸರ್ವ ಬ್ಯಾಂಕಿನ ನಿರ್ದೇಶಕರಾದ ಸತೀಶ್ ಮರಾಠೆ ಹಾಗೂ ESAF ಫೌಂಡೇಶನ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀಮತಿ ಮರೀನಾ ಪೌಲ್ ಪ್ರಶಸ್ತಿ ಪ್ರಧಾನ ಮಾಡಿದರು.

ಪ್ರಗತಿಮಿತ್ರದ ವ್ಯವಸ್ಥಾಪಕ ನಿರ್ದೇಶಕರಾದ ವಿವೇಕ ಹೆಗಡೆ, ಬಾಳೆಗದ್ದೆ ಹಾಗೂ ಹಿರಿಯ ನಿರ್ದೇಶಕರಾದ ಕೇಶವ ಶಿವರಾಮ ಜೋಶಿ, ಹುಣಸೆಹೊಂಡ ಪ್ರಶಸ್ತಿಯನ್ನು ಸ್ವೀಕರಿಸಿದರು.

ಪ್ರಗತಿಮಿತ್ರದ ರೈತಪರ ಕಾಳಜಿ, ಅಡಿಕೆ ಹಾಗೂ ಕಾಳು ಮೆಣಸಿನ ಕೊಯ್ಲೋತ್ತರ ನಿರ್ವಹಣೆ, ಮೌಲ್ಯವರ್ಧನೆ, ತೋಟ ನಿರ್ವಹಣೆಗೆ ಯಂತ್ರೋಪಕರಣಗಳ ಸೇವೆ, ಮಾರ್ಕೆಟಿಂಗ್, ಪರಿಕರಗಳ ವಿತರಣೆ, ಪಶುಸಂಗೋಪನಾ ಉತ್ಪಾದಕ ಸಂಸ್ಥೆಯ ಪ್ರವರ್ತನೆ ಹಾಗೂ ಕಂಪನಿಯ ಸಮಗ್ರ ಸಾಧನೆಗೆ ಈ ಪ್ರಶಸ್ತಿ ನೀಡಲಾಗಿದೆ.

ಒಂದೇ ವರ್ಷದಲ್ಲಿ "FPO Impact Award" ಮತ್ತು "Best Collective Award" ಗಳು ಪ್ರಗತಿಮಿತ್ರ ರೈತ ಉತ್ಪಾದಕ ಸಂಸ್ಥೆಗೆ ದೊರೆತಿರುವುದು ಅತ್ಯಂತ ಅಭಿನಂದನಾರ್ಹ ಸಂಗತಿಯಾಗಿದೆ ಎಂದು ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಸಂಸ್ಥೆಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗಕ್ಕೆ ಅಭಿನಂದನೆ ಸಲ್ಲಿಸಿದರು.



## ಮನುವಿಕಾಸ ಸಂಸ್ಥೆಯಿಂದ ಅವಸಾನದ ಅಂಚಿನಲ್ಲಿರುವ 303 ಕೆರೆಗಳ ಪುನರುಜ್ಜೀವನ



ಕೃಷಿ ಪ್ರಧಾನವಾದ ಭಾರತ ದೇಶದಲ್ಲಿ ಅನಿಯಮಿತವಾದ ಮಳೆ, ಅಕಾಲಿಕ ಮಳೆ ಮತ್ತು ಮಳೆಯ ಕೊರತೆಯಿಂದ ದೇಶದ ಅತೀ ಹೆಚ್ಚು ಜನರಿಗೆ ಉದ್ಯೋಗದ ಆಶ್ರಯವಾದ ಕೃಷಿ ವಲಯ ನಲುಗಿ ಹೋಗುತ್ತಿದೆ. ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯ ನ್ಯಾಯದ ಕೂಗು ಸ್ಥಳೀಯ ರೈತ ಸುಮುದಾಯದಲ್ಲೂ ಪ್ರತಿಧ್ವನಿಸುತ್ತಿದೆ. ಕರ್ನಾಟಕದ ಬಹುತೇಕ ಜಿಲ್ಲೆಗಳು ಬರಪೀಡಿತವಾಗಿದ್ದು ಸಣ್ಣ ಮತ್ತು ಅತಿ ಸಣ್ಣ ರೈತರು ಉದ್ಯೋಗ ಅರಸಿ ನಗರಗಳತ್ತ ಮುಖ ಮಾಡಿದ್ದಾರೆ. ಸರ್ಕಾರ ಕೂಡ ಅನೇಕ ಯೋಜನೆಗಳನ್ನು ರೂಪಿಸಿ ಗ್ರಾಮೀಣರ ವಲಸೆ ತಡೆಯುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದೆ.

ಬಿದ್ದ ಕಡಿಮೆ ನೀರನ್ನು ಹಿಡಿದು ನಿಲ್ಲಿಸಿ, ಕೆರೆ ಕಟ್ಟೆಗಳಲ್ಲಿ ಶೇಖರಿಸಿ ಕೃಷಿಯನ್ನು ಗೆದ್ದ ಅನೇಕ ಉದಾಹರಣೆಗಳು ಇರುವಾಗ, ಕೆರೆಗಳೇ ಊರಿನ ನೀರಿನ ಆಧಾರವಾಗಿದ್ದು, ಅನೇಕ ವರ್ಷಗಳಿಂದ ಕೆರೆಗಳಲ್ಲಿ ಹೂಳು ಸಂಗ್ರಹವಾಗಿ, ನೀರು ಹಿಡಿದುಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಂಡು ಅಭಿವೃದ್ಧಿಯ ದಾರಿ ಕಾಯುತ್ತಿರುವ ಅದೆಷ್ಟೋ ಕೆರೆಗಳು ಫಲವತ್ತಾದ ಮಣ್ಣನ್ನು ಒಡಲೊಳಗೆ ತುಂಬಿಕೊಂಡು ತಮ್ಮ ಕಾರ್ಯವನ್ನು ಸ್ಥಗಿತಗೊಳಿಸಿವೆ.

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಕಳೆದ 22 ವರ್ಷಗಳಿಂದ ಹಲವು ಸಮಾಜಮುಖಿ ಜನಪರ ಕಾರ್ಯ ಚಟುವಟಿಕೆಗಳಾದ ನೆಲ – ಜಲ ಸಂರಕ್ಷಣೆ, ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ, ಆರ್ಥಿಕ ಸ್ವಾವಲಂಬನೆ, ಸುಸ್ಥಿರ ಕೃಷಿ ಅಭಿವೃದ್ಧಿಗಳ ಮೂಲಕ ತಳಮಟ್ಟದ ಸಮುದಾಯವನ್ನು ತಲುಪಿದೆ.

ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನ ಮತ್ತು ರಕ್ಷಣೆ, ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆಯನ್ನು ರೈತ ಸಮುದಾಯಕ್ಕೆ ತಿಳಿಯಪಡಿಸಲು ಮನುವಿಕಾಸ ಸಂಸ್ಥೆಯು ಈಗಾಗಲೇ 303 ಸಣ್ಣ, ಮಧ್ಯಮ ಮತ್ತು ದೊಡ್ಡ ಕೆರೆಗಳನ್ನು ಉತ್ತರಕನ್ನಡ, ಹಾವೇರಿ, ಶಿವಮೊಗ್ಗ, ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪುನರುಜ್ಜೀವನಗೊಳಿಸಿ ರೈತರ ಮುಖದಲ್ಲಿ ಸ್ವಾವಲಂಬನೆಯ ನಗುವನ್ನು ಮೂಡಿಸಿದೆ.

ಮನುವಿಕಾಸ ಸಂಸ್ಥೆಯು ಎರಡು ಎಕರೆ ವಿಸ್ತೀರ್ಣದಿಂದ ಒಳಗೊಂಡು 160 ಎಕರೆಯ ವಿಸ್ತೀರ್ಣದವರೆಗಿನ ಅವಸಾನದ ಅಂಚಿನಲ್ಲಿರುವ ಕೆರೆಗಳನ್ನು ಗುರುತಿಸಿ, ಪುನರುಜ್ಜೀವನಗೊಳಿಸಿದೆ.

### ಪುನರುಜ್ಜೀವನಗೊಂಡ ಕೆರೆಗಳ ವಿವರ

| ಜಿಲ್ಲೆ | ತಾಲೂಕು | ಪುನರುಜ್ಜೀವನಗೊಂಡ ಕೆರೆಗಳ ಸಂಖ್ಯೆ |
|---|---|---|
| ಉತ್ತರ ಕನ್ನಡ | ಶಿರಸಿ | 57 |
| | ಮುಂಡಗೋಡ | 29 |
| | ಒಟ್ಟು | 86 |
| ಶಿವಮೊಗ್ಗ | ಸೊರಬ | 35 |
| | ಶಿಕಾರಿಪುರ | 02 |
| | ಒಟ್ಟು | 37 |
| | ಹಾವೇರಿ | 01 |
| ಹಾವೇರಿ | ಹಾನಗಲ್ | 80 |
| | ಶಿಗ್ಗಾವಿ | 11 |

| ಜಿಲ್ಲೆ | ತಾಲೂಕು | ಪುನರುಜ್ಜೀವನಗೊಂಡ ಕೆರೆಗಳ ಸಂಖ್ಯೆ |
|---|---|---|
| | ಹಿರೇಕೆರೂರ | 08 |
| | ಬ್ಯಾಡಗಿ | 20 |
| | ಒಟ್ಟು | 120 |
| ಧಾರವಾಡ | ಧಾರವಾಡ | 01 |
| | ಕಲಘಟಗಿ | 55 |
| | ಕುಂದಗೋಳ | 02 |
| | ಹುಬ್ಬಳ್ಳಿ | 02 |
| | ಒಟ್ಟು | 60 |
| ಒಟ್ಟು 13 ತಾಲೂಕು | 303 ಕೆರೆಗಳು | |

**ಈ** ಕಾರ್ಯಕ್ರಮದಿಂದ ಸರಿ ಸುಮಾರು 54,000 ಹೆಕ್ಟೇರ್ ಜಮೀನಿಗೆ ಹೆಚ್ಚುವರಿಯಾಗಿ ನೀರಾವರಿ ಸೌಲಭ್ಯವನ್ನು ಒದಗಿಸಿದೆ ಮತ್ತು 36,000 ರೈತರಿಗೆ ಕೃಷಿ ಚಟುವಟಿಕೆಗಳನ್ನು ಸಕ್ರಿಯವಾಗಿ ನಡೆಸಲ, 18,000 ರೈತ ಕುಟುಂಬಗಳಿಗೆ ಎರಡನೇ ಬೆಳೆಯನ್ನು ಬೆಳೆಯಲು ಇದರ ಪ್ರಯೋಜನ ಲಭಿಸಿದ್ದು ಮತ್ತು ಪ್ರತಿವರ್ಷ ಸರಾಸರಿ 10,000 ಮಿಲಿಯನ್ ಲೀಟರ್ ನೀರನ್ನು ಹಿಡಿದಿಡುವ ಸಾಮರ್ಥ್ಯವನ್ನು ಹೆಚ್ಚಿಸಲು ನೆರವಾಗಿದೆ.

ಮುಖ್ಯವಾಗಿ ಸಂಸ್ಥೆಯು ರೈತ ಸಮುದಾಯದ ಸಹಭಾಗಿತ್ವದೊಂದಿಗೆ ಕೆರೆಗಳನ್ನು ಪುನರುಜ್ಜೀವನಗೊಳಿಸುತ್ತದೆ. ಕೆರೆಯನ್ನು ಪುನರುಜ್ಜೀವನಗೊಳಿಸುವ ಪೂರ್ವದಲ್ಲಿ ಹಳ್ಳಿಗಳ ಪ್ರಾಥಮಿಕ ಸಮೀಕ್ಷೆ ನಡೆಸಿ ಕೆರೆಯ ಈಗಿನ ಸ್ಥಿತಿಗತಿಯನ್ನು ಪರಿಶೀಲಿಸುತ್ತದೆ. ಹಳ್ಳಿಯ ರೈತರಿಗೆ ಕೆರೆಯ ಪುನರುಜ್ಜೀವನದಿಂದಾಗುವ ಪ್ರಯೋಜನಗಳ ಬಗೆಗೆ ನಿರಂತರ ಸಭೆ ಮತ್ತು ಚರ್ಚೆ ನಡೆಸುತ್ತದೆ. ಗ್ರಾಮದ ಜನಸಂಖ್ಯೆ, ಕೆರೆಯ ಅಚ್ಚುಕಟ್ಟು ಪ್ರದೇಶಗಳ ರೈತರ ಸಂಖ್ಯೆ ಕೆರೆಯನ್ನು ಹೂಳೆತ್ತುವುದರಿಂದ ಎಷ್ಟು ಎಕರೆ ಜಮೀನಿಗೆ ಮತ್ತು ರೈತರಿಗೆ ಅನುಕೂಲವಾಗುತ್ತದೆ ಮತ್ತು ಹೂಳೆತ್ತಿದ ನಂತರದಲ್ಲಿ ಕೆರೆಯಲ್ಲಿ ಶೇಖರವಾಗುವ ನೀರಿನ ಪ್ರಮಾಣವನ್ನು ಸಂಸ್ಥೆ ದಾಖಲೀಕರಣ ನಡೆಸುತ್ತದೆ. ಹೂಳೆತ್ತಬೇಕಾದ ಕೆರೆಯ ಹೂಳು ಮತ್ತು ನೀರನ್ನು ಅದು ಕೃಷಿ ಚಟುವಟಿಕೆಗೆ ಯೋಗ್ಯವೇ ಎಂದು ಕೃಷಿ ವಿಜ್ಞಾನ ಕೇಂದ್ರ ಮತ್ತು ಸರಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸುತ್ತದೆ. ನಂತರದಲ್ಲಿ ಎಲ್ಲ ಭಾಗಿದಾರರ ಒಪ್ಪಿಗೆ ಪಡೆದು ಕೆರೆಯ ಗಾತ್ರದ ಆಧಾರದ ಮೇಲೆ ಗ್ರಾಮ ಪಂಚಾಯತಿಯ ಸಹಯೋಗದೊಂದಿಗೆ ಕೆರೆಯನ್ನು ಹೂಳೆತ್ತಲು ಪರವಾನಗಿ ಪತ್ರ ಪಡೆಯುತ್ತದೆ. ಕೆರೆಯ ಹೂಳನ್ನು ತೆಗೆಯಲು ಯಂತ್ರಗಳನ್ನು ಸಂಸ್ಥೆಯು ಉಚಿತವಾಗಿ ಒದಗಿಸಿ ರೈತರು ತಮ್ಮ ಸ್ವಂತ ಖರ್ಚಿನಲ್ಲಿ ಕೆರೆಯ ಹೂಳನ್ನು ತಮ್ಮ ಕೃಷಿ ಜಮೀನಿಗೆ ಒಯ್ಯುವಂತಾದರೆ ನಂತರ ಕೆರೆಯ ಪುನರುಜ್ಜೀವನ ಕಾರ್ಯಕ್ರಮ ಪ್ರಾರಂಭವಾದಂತೆ ಸರಿ.

ಯೋಜನೆಯ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸಂಸ್ಥೆಯು ಗ್ರಾಮದಲ್ಲಿ ಲಭ್ಯವಿರುವ ಕೆರೆಗಳು, ಹೂಳೆತ್ತಬೇಕಾದ ಕೆರೆಯ ಸ್ಥಳ ವಿವರಗಳು, ಊರಿನ ಜನಸಂಖ್ಯೆ ಮತ್ತು ರೈತರ ಜಮೀನಿನ ವಿವರ, ಅನುಸರಿಸುತ್ತಿರುವ ಕೃಷಿ ಪದ್ಧತಿ, ಬೆಳೆಗಳ ವಿಧ, ಮೊದಲಾದ ಪ್ರಾಥಮಿಕ ಮಾಹಿತಿಗಳನ್ನು ಸಂಪೂರ್ಣವಾಗಿ ಕಲೆಹಾಕುತ್ತದೆ. ಕೆರೆಯ ಹೂಳೆತ್ತುವ ಕಾರ್ಯ ಪ್ರಾರಂಭವಾದಾಗಿನಿಂದ ಹಿಡಿದು ಕೊನೆಗೊಳ್ಳುವವರೆಗೆ ಸಂಸ್ಥೆ ನಿರಂತರವಾಗಿ ಗ್ರಾಮದ ರೈತರ ಜೊತೆಗೆ ನಿರಂತರ ಸಂಪರ್ಕದಲ್ಲಿರುತ್ತದೆ. ಕೆರೆಯಿಂದ ಹೊರತೆಗೆದ ಹೂಳಿನ ಪ್ರಮಾಣ ಮತ್ತು ರೈತರು ತಮ್ಮ ಖರ್ಚಿನಲ್ಲಿ ಒಯ್ದ ಹೂಳಿನ ಪ್ರಮಾಣ ಇದೆಲ್ಲದರ ಲೆಕ್ಕವನ್ನು ಸಂಸ್ಥೆ ಕರಾರುವಕ್ಕಾಗಿ ಕಾಯ್ದುಕೊಳ್ಳುವದಲ್ಲದೆ ಕೆರೆಯನ್ನು ಸಂಪೂರ್ಣವಾಗಿ ಹೂಳೆತ್ತಿದ ನಂತರದಲ್ಲಿ ಇಂಜಿನಿಯರ್ ಸರ್ವೆಯನ್ನು ಸಹ ಕೈಗೊಳ್ಳುತ್ತದೆ. ಕೆರೆಯಲ್ಲಿ ಶೇಖರವಾಗಿರುವ ಹೂಳನ್ನು ಮಾತ್ರ ತೆಗೆದು "ಮದರ್‌ಅರ್ಥ್"ಗೆ ಏನೂ ಸಹ ಹಾನಿಯಾಗದಂತೆ ಸಂಸ್ಥೆಯು ತಾಂತ್ರಿಕ ವಿಷಯ ಪರಿಣಿತರೊಡನೆ ಸಮಾಲೋಚನೆ ನಡೆಸಿಯೇ ಮುಂದಿನ ಹೆಜ್ಜೆಯನ್ನಿಡುತ್ತದೆ. ಕೆರೆಯ ಇನ್ನಿತರ ಕೆಲಸಗಳಾದ ಕೋಡಿ ಮತ್ತು ತೂಬಿನ ದುರಸ್ತಿ ಮೊದಲಾದ ಕೆಲಸಗಳನ್ನು ಸಂಸ್ಥೆಯು ಮಹತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾತರಿ ಅಧಿನಿಯಮದ ಅಡಿಯಲ್ಲಿ ಗ್ರಾಮದ ಜನರನ್ನು ಸಂಘಟಿತರನ್ನಾಗಿ ಮಾಡಿ ಗ್ರಾಮ ಪಂಚಾಯತ್ ಮೂಲಕ ಅನುಷ್ಠಾನಗೊಳಿಸುತ್ತದೆ.

ಕೆರೆಯನ್ನು ಒಮ್ಮೆ ಹೂಳೆತ್ತಿದ ನಂತರ ಅದರ ಸುಸ್ಥಿರತೆಯನ್ನು ಮತ್ತು ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಸಂಸ್ಥೆಯು ಪ್ರತಿ ಕೆರೆಗೆ ಸಂಬಂಧಿಸಿದಂತೆ ಗ್ರಾಮ ಮಟ್ಟದಲ್ಲಿ "ಕೆರೆ ಅಭಿವೃದ್ಧಿ ಸಮೀತಿಗಳನ್ನು" ಹುಟ್ಟು ಹಾಕಿದೆ. ಕೆರೆ ಸಮೀತಿಯು ಸ್ಥಳೀಯ ಕೆರೆಗೆ ಸಂಬಂಧಿಸಿದ ಅಭಿವೃದ್ಧಿ ಚಟುವಟಿಕೆಗಳ ಮೇಲುಸ್ತುವಾರಿ ವಹಿಸಿ ಕೆರೆಯ ಆಗು ಹೋಗುಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.





ಕೆರೆ ಅಭಿವೃದ್ಧಿಯ ನಂತರದಲ್ಲಿ ಸಂಸ್ಥೆಯು ರೈತರಿಗೆ ಕೆರೆಯ ಪುನರುಜ್ಜೀವನದಿಂದಾದ ಅನುಕೂಲಗಳ ಕುರಿತಾಗಿಯೂ ಸಹ ಅಧ್ಯಯನ ನಡೆಸುತ್ತದೆ. ಉದಾರಹಣೆಗೆ ಕೆರೆ ಅಭಿವೃದ್ಧಿಯಿಂದ ರೈತರಿಗೆ ಕೃಷಿ ಜಮೀನಿನಲ್ಲಿ ಉಂಟಾದ ಬದಲಾವಣೆಗಳು, ಬೆಳೆ ಮಾರ್ಪಾಡು, ಬೆಳೆಯ ಇಳುವರಿಯ ಪ್ರಮಾಣದಲ್ಲಿ ಆದ ಏರಿಕೆ, ಜಮೀನಿನಲ್ಲಿ ತೇವಾಂಶದ ಪ್ರಮಾಣ, ಪ್ರಸಕ್ತ ವರ್ಷದಲ್ಲಿ ಕೆರೆಯಲ್ಲಿನ ನೀರಿನ ಸಂಗ್ರಹಣೆಯ ಏರಿಕೆಯ ಪ್ರಮಾಣ, ಸಮುದಾಯುದ ಮಟ್ಟದಲ್ಲಿ ಪ್ರಾರಂಭವಾದ ಪಶು ಸಂಗೋಪನೆಯ ಪ್ರಮಾಣ, ಗ್ರಾಮದಲ್ಲಿ ಕೆರೆ ಅಭಿವೃದ್ಧಿಯಿಂದ ಕೃಷಿ ಜಮೀನಿನ ಏರಿಕೆಯ ಪ್ರಮಾಣಗಳನ್ನು ಕಲೆಹಾಕಿ ವರದಿ ತಯಾರಿಸುತ್ತದೆ.

ಕೆರೆಯ ಪುನರುಜ್ಜೀವನದಿಂದ ಗ್ರಾಮಗಳಲ್ಲಿ ಕಡು ಬೇಸಿಗೆಯಲ್ಲಿ ಬೆಳೆಗಳಿಗೆ ಮತ್ತು ಜಾನುವಾರುಗಳಿಗೆ ನೀರಿನ ದಾಹ ಇಂಗುತ್ತಿದೆ. ಕೆರೆಯಲ್ಲಿನ ಹೂಳು ರೈತರ ಜಮೀನುಗಳಿಗೆ ಸಾವಯವ ಗೊಬ್ಬರವಾಗಿ ಮಾರ್ಪಟ್ಟು ಮುಂದಿನ 3–4 ವರ್ಷಗಳ ಕಾಲ ರೈತರಿಗೆ ಹೊರಗಡೆಯ ರಸಗೊಬ್ಬರಗಳಿಗೆ ಅವಂಬಿತವಾಗುವುದನ್ನು ತಪ್ಪಿಸಿದೆ. ಕೆರೆಯ ಆಳ ಹೆಚ್ಚಾಗಿದ್ದರಿಂದ ನೀರಿನ ಶೇಖರಣೆ ಹೆಚ್ಚಾಗಿ ಭೂಮಿಗೆ ನೀರಿಂಗುವ ಪ್ರಮಾಣ ಮತ್ತು ಕೆರೆಯ ಅಚ್ಚುಕಟ್ಟಿನ ಪ್ರದೇಶಗಳ ಜಮೀನಿನಲ್ಲಿ ನೀರಿನ ಸಾಂದ್ರತೆ ಹೆಚ್ಚಾಗಿದೆ. ಕೇವಲ ಏಕ ಬೆಳೆಗೆ ಸೀಮಿತವಾಗಿದ್ದ ರೈತ ಸಮುದಾಯ ಈಗ ಹಿಂಗಾರು ಬೆಳೆ, ತೋಟಗಾರಿಕೆ ಬೆಳೆಗಳನ್ನು ಬೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ, ಜಾನುವಾರು ನಿರ್ವಹಣೆ ಪಶುಸಂಗೋಪನೆಯಂತಹ ಪರ್ಯಾಯ ಜೀವನೋಪಾಯ ನಿರ್ವಹಣೆಯಿಂದ ರೈತರಿಗೆ ಪರ್ಯಾಯ ವಾರ್ಷಿಕ ಆದಾಯದ ಪ್ರಮಾಣ ಅಧಿಕವಾಗಿದೆ. ಊರಿನ ಮಹಿಳೆಯರ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ 3–4 ಕಿಲೋಮೀಟರ್‌ಗಳ ಓಡಾಟ ತಪ್ಪಿದಂತಾಗಿದೆ. ವರ್ಷದಿಂದ ವರ್ಷಕ್ಕೆ ಅಂತರ್ಜಲ ಪ್ರಮಾಣ ಅಧಿಕವಾಗಿದೆ. ಕೆರೆಯ ಆಸು ಪಾಸು 2–3 ವರ್ಷದಿಂದ ಬರಿದಾಗಿದ್ದ ಬೋರ್ ವೆಲ್‌ಗಳಲ್ಲಿ ಮತ್ತೆ ನೀರಿನ ಲಭ್ಯತೆ ಕಂಡುಬಂದಿದೆ.

ಒಂದು ಗ್ರಾಮದ ಕೆರೆಯ ಅಭಿವೃದ್ಧಿಯಿಂದ ಸಮಾಜದ ವಿವಿಧ ಸ್ತರಗಳ ಸಮುದಾಯಗಳ ಪಾಲ್ಗೊಳ್ಳುವಿಕೆ, ಒಡಂಬಡಿಕೆ ಸಾಧ್ಯವಾಗುತ್ತದೆ, ಗ್ರಾಮದಲ್ಲಿ ಒಗ್ಗಟ್ಟಿನ ಜೊತೆಗೆ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಏರು ಪೇರುಗಳ ಸಮತೋಲನ ಸಾಧ್ಯವಾಗುತ್ತದೆ. ಮುಖ್ಯವಾಗಿ ಲಭ್ಯವಿರುವ ಸ್ಥಳೀಯ ಸಂಪನ್ಮೂಲದ ಸಮರ್ಪಕ ಬಳಕೆಯಿಂದ ರೈತಾಬಿ ಸಮುದಾಯದ ಆರ್ಥಿಕ ಅಭಿವೃದ್ಧಿ ಸಾಧ್ಯವಾಗಿದೆ.

ಒಂದು ದೇಶದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಮೊದಲು ಅದು ಗ್ರಾಮಗಳ ಅಭಿವೃದ್ಧಿಯಿಂದ ಪ್ರಾರಂಭವಾಗಬೇಕು ಎನ್ನುವ ಮುಖ್ಯ ಉದ್ದೇಶದೊಂದಿಗೆ ಮನುವಿಕಾಸ ಸಂಸ್ಥೆ ಜನಸಾಮಾನ್ಯರಲ್ಲಿ ಜಲ ಜಾಗೃತಿಯನ್ನು ಪಸರಿಸಲು ಅವಿರತವಾಗಿ ಶ್ರಮಿಸುತ್ತಿದೆ.

ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆಯಿಂದ ಹೇಗೆ ಸಮುದಾಯಗಳ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು, ಮುಂದಿನ ಪೀಳಿಗೆಗೆ ಜಲ ದಾಹವನ್ನು ನೀಗಿಸಲು ಬರಿದಾಗುವ ಜೀವ ಜಲವನ್ನು ಕಾಪಾಡಲು ಇಂದಿನ ಸಮುದಾಯಗಳ ಪಾತ್ರ ಏನೆಂದು ತಿಳಿಸಿಕೊಡುವ ನಿಟ್ಟಿನಲ್ಲಿ ಸಂಸ್ಥೆ ಮಾಡುತ್ತಿರುವ ಕೆಲಸ ಶ್ಲಾಘನೀಯವಾದರೆ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ಅನುಕರಣೀಯ ಎಂಬುದರಲ್ಲಿ ಸಂಶಯವಿಲ್ಲ.



## ಪ್ರಸಕ್ತ ವರ್ಷ ಸಂಸ್ಥೆಯು ಸ್ಮೈಲ್ ಫೌಂಡೇಶನ್‌ನ ಸಹಯೋಗದೊಂದಿಗೆ ಆಯ್ದ ಮಹಿಳೆಯರಿಗೆ ಕೌಶಲ್ಯಾಧಾರಿತ ತರಬೇತಿಗಳನ್ನು ಆಯೋಜಿಸಿದ್ದು ಅದರ ಯಾದಿ ಈ ಕೆಳಗಿನಂತಿದೆ.

### ಡಿಜಿಟಲ್ ಸಾಕ್ಷರತಾ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 25–12–2024 | ದಾಂಡೇಲಿ | 36 |
| 2 | 28–12–2024 | ಕುಮಟಾ | 43 |
| 3 | 30–12–2024 | ಸಿದ್ದಾಪುರ | 68 |
| 4 | 31–12–2024 | ಮುಂಡಗೋಡ | 34 |
| 5 | 09–01–2025 | ತಾವರಗೇರಿ | 51 |
| 6 | 11–01–2025 | ಶಿರಸಿ | 52 |
| 7 | 16–01–2025 | ಉಪ್ಪುಂದ | 44 |
| 8 | 12–02–2025 | ಸಿದ್ದಾಪುರ | 40 |
| 9 | 20–02–2025 | ಶಿರಸಿ | 47 |
| 10 | 12–03–2025 | ದಂಡೇಬಾಗ | 31 |

### ಕೈ ತೋಟ ಹಾಗೂ ಸುಸ್ಥಿರ ಕೃಷಿ ಅಭಿವೃದ್ಧಿ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 25–01–2025 | ಸಿದ್ದಾಪುರ | 43 |
| 2 | 04–02–2025 | ಕುಮಟಾ | 31 |
| 3 | 12–02–2025 | ಕಾರವಾರ | 43 |
| 4 | 28–02–2025 | ಮುರ್ಕವಾಡ | 48 |
| 5 | 20–03–2025 | ಸಿದ್ದಾಪುರ | 58 |

### ಸುಧಾರಿತ ಹೊಲಿಗೆ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 27–12–2025 | ಶಿರಸಿ | 18 |
| 2 | 17–03–2025 | ಸಿದ್ದಾಪುರ | 30 |
| 3 | 26–03–2025 | ಕಾರವಾರ | 30 |

### ಕೇಟರಿಂಗ್ ತರಬೇತಿ

| ಅ.ನಂ. | ತರಬೇತಿ ದಿನಾಂಕ | ಸ್ಥಳ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 20–02–2025 | ಕಾರವಾರ | 31 |
| 2 | 07–03–2025 | ಹುಲಬಿಕೊಂಡ | 25 |










ಮನುವಿಕಾಸ ಸಂಸ್ಥೆ, ಕರ್ಜಗಿ
ಮತ್ತು
ಸೈಲ್ ಫೌಂಡೇಶನ್
KITCHEN GARDEN AND SUSTAINABLE
AGRICULTURE TRAINING
ಕೈತೋಟ ನಿರ್ಮಾಣ ಮತ್ತು
ಸುಸ್ಥಿರ ಕೃಷಿ ತರಬೇತಿ

# ಮನುವಿಕಾಸದಿಂದ ನಿರ್ಮಿತ ಕೃಷಿ ಹೊಂಡಗಳು ರೈತಾಪಿ ಸಮುದಾಯದಲ್ಲಿ ನೀಗಿದ ನೀರಿನ ಆತಂಕಗಳು

ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಉಪಯೋಗ ಮತ್ತು ರೈತ ಸಮುದಾಯದ ಏಳಿಗೆಗಾಗಿ ಮನುವಿಕಾಸ ಸಂಸ್ಥೆಯು ಹಲವಾರು ದಾನಿ ಸಂಸ್ಥೆಗಳ ಸಹಯೋಗದೊಂದಿಗೆ 4000 ಕ್ಕೂ ಹೆಚ್ಚು ಸಣ್ಣಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿದೆ. ಇದರಲ್ಲಿ ರೈತರು ತಮ್ಮ ಹೊಲಗಳಿಗೆ ನೀರಿನ ಆಕರಗಳನ್ನು ಬಳಸಿಕೊಳ್ಳುವದರ ಜೊತೆಗೆ ಕುಡಿಯಲು ಯೋಗ್ಯವಾದ ನೀರನ್ನು ಸಹ ಪಡೆಯುತ್ತಿದ್ದಾರೆ. ಈ ಸಣ್ಣ ಕೃಷಿ ಹೊಂಡಗಳು ತಲಾ 30 ಅಡಿ ಉದ್ದ ಮತ್ತು ಅಗಲವನ್ನು ಹೊಂದಿದ್ದು 10 ಅಡಿ ಆಳವನ್ನು ಹೊಂದಿವೆ. ಮನುವಿಕಾಸದ ಅಧ್ಯಯನದ ಪ್ರಕಾರ ಒಂದು ಕೃಷಿ ಹೊಂಡ ಮೂರು ಜನ ರೈತರಿಗೆ ಸಹಾಯಕವಾಗಬಲ್ಲದು. ರೈತರಿಗೆ ತಾವು ಬೆಳೆಯುವ ಬೆಳೆಗಳಿಗೆ ನೀರನ್ನು ಒದಗಿಸುವುದರ ಜೊತೆಗೆ ಬೇಸಿಗೆಯ ಸಮಯದಲ್ಲಿ ಕೂಡ ನೀರಿನ ಆಕರಕ್ಕಾಗಿ ಬೇರೆ ಮೂಲಗಳನ್ನು ಅವಲಂಬಿಸುವ ಅನಿವಾರ್ಯತೆಯನ್ನು ಈ ಸಣ್ಣ ಕೃಷಿ ಹೊಂಡಗಳು ತಪ್ಪಿಸಿವೆ.

ಶಿರಸಿ, ಸಿದ್ದಾಪುರ, ಯಲ್ಲಾಪುರ, ಸೊರಬ ತಾಲೂಕುಗಳಲ್ಲಿ ಕೃಷಿಹೊಂಡಗಳನ್ನು ನಿರ್ಮಿಸಿ ರೈತರ ಕೃಷಿ ಜಮೀನಿಗೆ ನೀರುಣಿಸಲುಸಹಕಾರಿಯಾಗಿದೆ. ಪ್ರತಿ ವರ್ಷ ಸಾವಿರಾರು ರೂಪಾಯಿ ಹಣವನ್ನು ಖರ್ಚು ಮಾಡಿ ಬೋರ್ ವೆಲ್ ಕೊರೆಸಿ ಸಾಕಷ್ಟು ರೈತರು ಕೈಸುಟ್ಟುಕೊಳ್ಳುತ್ತಿದ್ದರು, ಮನುವಿಕಾಸ ಸಂಸ್ಥೆಯ ವತಿಯಿಂದ ಕಡಿಮೆ ವೆಚ್ಚದಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿಕೊಟ್ಟಿದ್ದರಿಂದ ಅಂತರ್ಜಲ ಮಟ್ಟವು ಹೆಚ್ಚುತ್ತಿದೆ, ಜೊತೆಯಲ್ಲಿ ಬೊರವೆಲ್‌ಗಳಿಗೆ ಹೊಸ ಜೀವ ಕಳೆ ತುಂಬಿ ರೈತರು ನೆಮ್ಮದಿಯ ಕೃಷಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಮಳೆಯನ್ನು ನಂಬಿ ವರ್ಷಕ್ಕೆ ಒಂದೇ ಬೆಳೆಯನ್ನು ಬೆಳೆಯುತ್ತಿದ್ದ ರೈತರು ಮನುವಿಕಾಸ ನಿರ್ಮಿಸಿಕೊಟ್ಟ ಕೃಷಿ ಹೊಂಡಗಳಿಂದ ಉತ್ತಮ ನೀರಿನ ಲಭ್ಯತೆಯಿಂದ ಬೇಸಿಗೆಯಲ್ಲಿ ತರಕಾರಿ, ಏಕದಳ – ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದಾರೆ.



# ಮನುವಿಕಾಸ ಸಂಸ್ಥೆಯಿಂದ ಸಿದ್ದಿ ಸಮುದಾಯದ ಅಭಿವೃದ್ಧಿ

ಮನುವಿಕಾಸ ಸಂಸ್ಥೆಯು ನಬಾರ್ಡ ಬೆಂಗಳೂರು ಇವರ ಸಹಯೋಗದೊಂದಿಗೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಡೊಂಗ್ರಿ ಗ್ರಾಮ ಪಂಚಾಯತ ವ್ಯಾಪ್ತಿಯ ಆಯ್ದ150 ಕುಟುಂಬಗಳಿಗೆ ಸ್ವ ಸಹಾಯ ಸಂಘಗಳ ರಚನೆ, ಪರ್ಯಾಯ ಜೀವನೋಪಾಯ ನಿರ್ವಹಣೆ, ನಾಯಕತ್ವ ವೃದ್ಧಿ ಮೊದಲಾದ ಕಾರ್ಯಚಟುವಟಿಕೆಗಳನ್ನು ರೂಪಿಸಿದೆ.

ಸಿದ್ದಿ ಸಮುದಾಯದ ಮಹಿಳೆಯರು ಆರ್ಥಿಕವಾಗಿ ಅಭಿವೃದ್ಧಿಯನ್ನು ಸಾಧಿಸಲು ಅವರಿಗೆ ಪರ್ಯಾಯ ಜೀವನೋಪಾಯ ನಿರ್ವಹಣೆಯಾಗಿ ಸಂಸ್ಥೆಯು ಕೋಳಿ ಮರಿಗಳು ಮತ್ತು ಗೂಡುಗಳ ವಿತರಣೆ, ಎರೆಹುಳು ಘಟಕದ ನಿರ್ಮಾಣ, ಜೇನು ಪೆಟ್ಟಿಗೆಗಳ ವಿತರಣೆ, ಸಾವಯವ ಗೊಬ್ಬರ ಮತ್ತು ಸಾವಯವ ತರಕಾರಿ ಬೀಜಗಳ ವಿತರಣೆ, ಗೃಹ ಬಳಕೆಗಾಗಿ ಸೌರಶಕ್ತಿ ದೀಪಗಳ ವಿತರಣೆ, ಹೊಗೆರಹಿತ ಒಲೆಗಳ ವಿತರಣೆಯನ್ನು ಮಾಡಿದೆ ಈ ನಿಟ್ಟಿನಲ್ಲಿ ರೂಪಿತವಾದ ಯೋಜನೆಯು ಸಮರ್ಪಕವಾಗಿ ಅನಿಷ್ಠಾನಗೊಳ್ಳಲು ಫಲಾನುಭವಿಗಳಿಗೆ ಅಗತ್ಯ ತರಬೇತಿಗಳನ್ನು ಮತ್ತು ಕ್ಷೇತ್ರ ಭೇಟಿಗಳನ್ನೂ ಸಹ ಆಯೋಜಿಸಿದೆ.

ತರಬೇತಿಗಳನ್ನು ಪಡೆದ ಫಲಾನುಭವಿಗಳು ಈಗಾಗಲೇ ಸಾವಯವ ತರಕಾರಿಗಳು, ಜೇನು ತುಪ್ಪ, ಎರೆಹುಳು ಗೊಬ್ಬರ, ಕೋಳಿ ವ್ಯಾಪಾರ ಮೊದಲಾದ ಪರ್ಯಾಯ ಜೀವನೋಪಾಯ ಆದಾಯ ತರುವಂತಹ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾರೆ. ಬ್ಯಾಂಕ್ ವ್ಯವಹಾರಗಳು, ಉಳಿತಾಯ ಮನೋಭಾವನೆ, ನಾಯಕತ್ವ ವೃದ್ಧಿ ಮೊದಲಾದ ಗುಣಗಳನ್ನು ಸ್ವ- ಸಹಾಯ ಸಂಘಗಳ ರಚನೆಯ ಮೂಲಕ ಫಲಾನುಭವಿಗಳು ಪಡೆದಿದ್ದಾರೆ.ಮುಂಬರುವ ದಿನಗಳಲ್ಲಿ ಈ ಯೋಜನೆಯನ್ನು ಜಿಲ್ಲೆಯ ಉಳಿದ ತಾಲೂಕುಗಳಿಗೆ ವಿಸ್ತರಿಸುವ ಉದ್ದೇಶವನ್ನು ಸಂಸ್ಥೆ ಹೊಂದಿದೆ.















# ಮನುವಿಕಾಸದಿಂದ ಅಭಿವೃದ್ಧಿಪಡಿಸಲಾದ ಕೆರೆಗೆ ಶಾಸಕರ ಭೇಟಿ



ದಿನಾಂಕ 27–03–2025 ರಂದು ಮನುವಿಕಾಸ ಸಂಸ್ಥೆಯಿಂದ ಹೂಳು ತೆಗೆದು ಅಭಿವೃದ್ಧಿ ಪಡಿಸಿದ ಮುಂಡಗೋಡ ತಾಲೂಕಿನ ಬಾಚಣಕಿ ಗ್ರಾಮದ ಬಳ್ಳಿಗಟ್ಟಿ ಕೆರೆಯನ್ನು ಯಲ್ಲಾಪುರ ಮತ್ತು ಮುಂಡಗೋಡ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಶಿವರಾಮ ಹೆಬ್ಬಾರ ಮತ್ತು ಮಾಜಿ ಶಾಸಕರಾದ ಶ್ರೀಯುತ ವಿ.ಎಸ್ ಪಾಟೀಲ್ ವೀಕ್ಷಿಸಿದರು.

ಈ ಸಂದರ್ಭದಲ್ಲಿ ಅವರು ತಮ್ಮ ಕ್ಷೇತ್ರದಲ್ಲಿ ಹೆಚ್ಚು ಕೆರೆಗಳನ್ನು ಹೂಳು ತೆಗೆದು ಅಭಿವೃದ್ಧಿ ಪಡಿಸಿದ ಮನುವಿಕಾಸ ಸಂಸ್ಥೆಗೆ ಅಭಿನಂದನೆ ಸಲ್ಲಿಸಿ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟರವರಿಗೆ ಸನ್ಮಾನಿಸಿ ಗೌರವಿಸಿದರು.

ಶ್ರೀಯುತ ವಿ ಎಸ್ ಪಾಟೀಲ್‌ರವರು "ಮನುವಿಕಾಸ ಸಂಸ್ಥೆ ರೈತರ ಹಿತದೃಷ್ಟಿಯಿಂದ ಐದು ಜಿಲ್ಲೆಗಳಲ್ಲಿ ಕೆರೆ ಅಭಿವೃದ್ಧಿ ಪಡಿಸಿ ನೀರನ್ನು ಇಂಗಿಸಿ ಅಂತರ್ಜಲ ಮಟ್ಟವನ್ನು ಸುಧಾರಿಸಲು ಅವಿರತ ಪ್ರಯತ್ನ ಮಾಡುತ್ತಿದೆ. ದಾನಿ ಸಂಸ್ಥೆಯಿಂದ ಕಷ್ಟಪಟ್ಟು ಆರ್ಥಿಕ ಸಹಾಯವನ್ನು ಪಡೆದು ನಮ್ಮ ರೈತರ ಅಭಿವೃದ್ಧಿಗೆ ಕಾರಣವಾಗಿದೆ, ಮುಂಬರುವ ದಿನಗಳಲ್ಲಿ ಸಂಸ್ಥೆಯ ಕಾರ್ಯ ವ್ಯಾಪ್ತಿಯು ವ್ಯಾಪಿಸಲಿ" ಎಂದರು.

ಕಾರ್ಯಕ್ರಮದಲ್ಲಿ ತಾಲೂಕ ಪಂಚಾಯತ ಇ.ಓ., ಗ್ರಾಮ ಪಂ ಅಭಿವೃದ್ಧಿ ಅಧಿಕಾರಿಗಳಾದ ಗುರು ಪ್ರಸನ್ನ, ಗ್ರಾಮ ಪಂ. ಅಧ್ಯಕ್ಷರು, ಸದಸ್ಯರು ತಾಲೂಕಾ ರೈತ ಸಂಘದ ಅಧ್ಯಕ್ಷರಾದ ಶ್ರೀ ಪಿರಜ್ಜಾ ಸಾಗರ, ಹಾಗೂ ತಾಲೂಕಿನ ಅನೇಕ ಗಣ್ಯರು ಹಾಗೂ ಗ್ರಾಮದ ಹಿರಿಯರು ರೈತ ಭಾಂದವರು ಯುವಕರು, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮನುವಿಕಾಸ ಸಂಸ್ಥೆಯು ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಪ್ರತಿ ತಾಲೂಕಿಗೂ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ.**

| | | |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94494 53774 |
| | ಅಶ್ವತ್ಥ ನಾಯ್ಕ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 99011 82957 |
| | ಗಣಪತಿ ಗಾಮದ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 91132 59935 |
| | ಭವಾನಿ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 82960 53961 |
| | ಬಾಲಚಂದ್ರ ಗೌಡ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94804 16732 |
| ಸಿದ್ದಾಪುರ | ಪುನೀತ್ ನಾಯ್ಕ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 96862 24908 |
| | ನಾಗರಾಜ್ ಹಸ್ಲರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 70227 63799 |
| ಸೊರಬ | ಪುನೀತ್ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 96862 24908 |
| ಹಳಿಯಾಳ & ದಾಂಡೇಲಿ | ನಿರಂಜನ್ ಕದಂ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72596 89630 |
| ಮುಂಡಗೋಡ | ಗಣಪತಿ ಯಲಿವಾಳ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 99802 05013 |
| ಹಾನಗಲ್ & ಬ್ಯಾಡಗಿ | ಜಗದೀಶ ಈರಣ್ಣನವರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 73380 06242 |
| ಹಿರೇಕೆರೂರ | ಬಸವರಾಜ ಎಸ್.ಜಿ. (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 84310 52674 |
| ಕಲಘಟಗಿ | ಬಸವರಾಜ್ ರಡ್ಡೇರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 9845884293 |
| ಕಾರವಾರ | ಸುಜಾತಾ ದುರ್ಗೇಕರ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72045 77307 |
| ಕುಮಟಾ & ಹೊನ್ನಾವರ | ನವೀನ ನಾಯ್ಕ (ಸ್ವ ಸಹಾಯ ಸಂಘಗಳ ನಿರ್ವಹಣೆ) | 78991 54285 |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ.

MANUVIKASA

# ಮನುವಿಕಾಸ

‘ಶ್ರೀ ಮಾತಾ’ ಬಿಲ್ಡಿಂಗ್, ವಿಜಯನಗರ, ತಾ|| ಶಿರಸಿ
ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ–581401

Phone: +91 98459 82552 Email: manuvikasa@gmail.com
Website : www.manuvikasa.org